ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

28 ಏಪ್ರಿಲ್ 2026 ಮಂಗಳವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 49 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ವಿರುದ್ಧ ನವದೆಹಲಿಯಲ್ಲಿ ಸೋಮವಾರ ನಡೆದ ಐಪಿಎಲ್ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ 10 ವಿಕೆಟ್ ನಷ್ಟಕ್ಕೆ 75 ರನ್ ಗಳಿಸಿದೆ.


ತನ್ನ ಹೆಸರನ್ನೇ ದ್ವೇಷಿಸಿದ್ದ ಫುಟ್ಬಾಲ್ ದಂತಕತೆ ಪೀಲೆ » 2


ಜಾನಪದ ಹುಟ್ಟಿದ್ದು ರಾಗಿ ಬೀಸುವ ಪದದಿಂದ » 3


ಮಹಿಳೆಯರ ಸುರಕ್ಷತೆ ಬಗ್ಗೆ ಹೈಕೋರ್ಟ್ ಕಳವಳ » 4

## ಇಂದು ಉಸ್ತುವಾರಿ ಸಚಿವರ ಜಿಲ್ಲಾ ಪ್ರವಾಸ

• ಪ್ರಜೋದಯ ವರದಿ

**ಹಾಸನ:** ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ ಅವರು ಮಂಗಳವಾರ ಬೆಳಿಗ್ಗೆ 8.30ಕ್ಕೆ ನಗರದ ಅರಣ್ಯ ಭವನದಲ್ಲಿ ಕಾಡಾನೆ-ಮಾನವ ಸಂಘರ್ಷ ಸಂಬಂಧ ಪರಿಶೀಲನಾ ಸಭೆ ನಡೆಸಿ, ಇಟಿಎಫ್ ನಿಯಂತ್ರಣ ಕೊಠಡಿ ವೀಕ್ಷಣೆ ಮಾಡಲಿದ್ದಾರೆ. ಬಳಿಕ ಬೇಲೂರಿಗೆ ತೆರಳಿ ಹಾಸನ-ಬೇಲೂರು ರಸ್ತೆ ಕಾಮಗಾರಿ ಹಾಗು ರೈಲ್ವೆ ಯೋಜನೆಗಳ ಪ್ರಗತಿ ಪರಿಶೀಲಿಸಲಿದ್ದಾರೆ.

ನಂತರ ಅರೇಹಳ್ಳಿಗೆ ಭೇಟಿ ನೀಡಿ ಕಾಡಾನೆಗಳ ಚಲನೆಯನ್ನು ಗಮನಿಸಲು ಅಳವಡಿಸಿರುವ ಟ್ರ್ಯಾಕಿಂಗ್ ಸಿಸ್ಟಮ್ ಮತ್ತು ಮಾನಿಟರಿಂಗ್ ವ್ಯವಸ್ಥೆಯ ಕಾರ್ಯಕ್ಷಮತೆಯನ್ನು ಅವಲೋಕಿಸಲಿದ್ದಾರೆ. ಇದಾದ ಬಳಿಕ ಬೇಲೂರು, ಹಳೇಬೀಡು ಪ್ರವಾಸಿ ತಾಣಗಳಲ್ಲಿ ಪ್ರವಾಸೋದ್ಯಮ ಇಲಾಖೆಯ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಪರಿಶೀಲನೆ ನಡೆಸುವರು. ಸಂಜೆ ಅರಸೀಕೆರೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿನ ಜಲಜೀವನ್ ಮಿಷನ್ ಯೋಜನೆಯಡಿ ನಡೆಯುತ್ತಿರುವ ಕುಡಿಯುವ ನೀರಿನ ಕಾಮಗಾರಿಗಳ ಪ್ರಗತಿಯನ್ನು ವಿಮರ್ಶಿಸಲಿದ್ದಾರೆ.

# ಡಿ.ಕೆ.ಶಿ. ಬಳಿಕ ಸಿಎಂ ಆಪ್ತರು ದೆಹಲಿಗೆ

## ಸಿದ್ದರಾಮಯ್ಯ ಬಣ ಅಲರ್ಟ್ | ಹೈಕಮಾಂಡ್ ನಾಯಕರ ಭೇಟಿಗೆ ಕಸರತ್ತು

• ಪ್ರಜೋದಯ ವರದಿ

**ಬೆಂಗಳೂರು:** ರಾಜ್ಯದಲ್ಲಿ ನಾಯಕತ್ವ ಬದಲಾವಣೆ ವಿಚಾರ ತೀವ್ರ ಸ್ವರೂಪ ಪಡೆದುಕೊಳ್ಳುತ್ತಿದ್ದು, ಡಿ.ಕೆ.ಶಿವಕುಮಾರ್, ಡಿ.ಕೆ.ಸುರೇಶ್ ಅವರು ಹೈಕಮಾಂಡ್ ನಾಯಕರನ್ನು ಭೇಟಿ ಮಾಡಿ ವಾಪಾಸ್ಸಾದ ಬೆನ್ನಲ್ಲೇ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಪ್ತರು ದೆಹಲಿ ಪ್ರವಾಸಕ್ಕೆ ಸಿದ್ಧರಾಗಿದ್ದಾರೆ.

ಸಚಿವ ಹೆಚ್.ಸಿ.ಮಹದೇವಪ್ಪ , ರಾಯರೆಡ್ಡಿ ದೆಹಲಿಗೆ ತೆರಳಿದ್ದು, ಮಂಗಳವಾರ ಕೇಂದ್ರ ಸಚಿವರ ಜೊತೆ ಸಭೆಯಲ್ಲಿ ಭಾಗಿಯಾಗಲಿದ್ದಾರೆ. ಈ ವೇಳೆ ಅವಕಾಶ ಸಿಕ್ಕರೆ ಹೈಕಮಾಂಡ್ ನಾಯಕರ ಭೇಟಿಗೆ ಕಸರತ್ತು ನಡೆಸಲಿದ್ದಾರೆ. ಇನ್ನು ಸಚಿವ ಸತೀಶ್ ಜಾರಕಿಹೊಳಿ ಅವರು ದೆಹಲಿಯಲ್ಲಿ ಬೀಡು ಬಿಟ್ಟಿದ್ದಾರೆ.

ಮೇ 4ಕ್ಕೆ ಪಂಚ ರಾಜ್ಯಗಳ ಚುನಾವಣಾ ಫಲಿತಾಂಶ ಬರಲಿದೆ. ಈ ಹಿನ್ನಲೆ ಮುಂದಿನ ಬೆಳವಣಿಗೆ ಏನೆಂಬುದು ಸಾಕಷ್ಟು ಕುತೂಹಲಕ್ಕೆ ಕಾರಣವಾಗಿದೆ. ಸದ್ಯ ದೆಹಲಿ ಮಟ್ಟದಲ್ಲಿ ಬೆಳವಣಿಗೆಗಳು ನಡೆಯುತ್ತಿವೆ. ಮೇ 15 ರಂದು ಡಿ.ಕೆ. ಶಿವಕುಮಾರ್ ಅವರ ಜನ್ಮದಿನವಾಗಿದ್ದು, ಅಷ್ಟರೊಳಗೆ ಅವರಿಗೆ ಸಿಹಿ ಸುದ್ದಿ ಬರಬಹುದೆಂಬ



ಆಶಯ ನಮ್ಮದಾಗಿದೆ ಎಂದು ಡಿ.ಕೆ.ಶಿ ಆಪ್ತರು ಹೇಳುವ ಮೂಲಕ ರಾಜಕೀಯ ವಲಯದಲ್ಲಿ ಕುತೂಹಲ ಮೂಡಿಸಿದ್ದಾರೆ.

ಡಿ.ಕೆ.ಸಹೋದರರ ಹೈಕಮಾಂಡ್ ಭೇಟಿ ಹಾಗು ಅಧಿಕಾರ ಹಂಚಿಕೆ ಬಗ್ಗೆ ಪ್ರತಿಕ್ರಿಯಿಸಿದ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರು, ನಾವೆಲ್ಲಾ ಮಾಡುವುದೇ ರಾಜಕೀಯ. ಇದರಲ್ಲಿ ಬೆಳವಣಿಗೆ ಏನಿದೆ. ರಾಜಕಾರಣ ಎಂಬ ವ್ಯಾಖ್ಯಾನದಲ್ಲೇ ಅದೆಲ್ಲಾ ಬಂದು ಬಿಡುತ್ತದೆ. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ರಕ್ಷಣಾ ಇಲಾಖೆಗೆ ಸಂಬಂಧಪಟ್ಟ ಕೆಲಸಗಳ ಬಗ್ಗೆ ಚರ್ಚೆ ಮಾಡಲು ಕೇಂದ್ರ ಸಚಿವ ರಾಜನಾಥ್ ಸಿಂಗ್ ಅವರನ್ನು ಭೇಟಿ ಮಾಡಿದ್ದಾರೆಂದರು.

**ಶೀಘ್ರದಲ್ಲೇ ಒಳ್ಳೆಯ ಸ್ಥಾನ**

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಶೀಘ್ರದಲ್ಲೇ ಒಳ್ಳೆಯ ಸ್ಥಾನ ಸಿಗಲಿದೆ ಎಂದು ಕುಣಿಗಲ್ ಶಾಸಕ ಡಾ.ರಂಗನಾಥ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಈ ಮೂಲಕ ಮುಖ್ಯಮಂತ್ರಿ ಸ್ಥಾನ ಬದಲಾವಣೆಯ ವದಂತಿಗಳಿಗೆ ಅವರು ಪರೋಕ್ಷವಾಗಿ ಪುಷ್ಟಿ ನೀಡಿದ್ದಾರೆ.

ನಾವು ನಮ್ಮ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಬೇಕು, ಫಲಾಫಲಗಳನ್ನು ದೇವರಿಗೆ ಬಿಡಬೇಕು. ಅದೇ ರೀತಿ ನಮ್ಮ ಡಿ.ಕೆ. ಶಿವಕುಮಾರ್ ಅವರು ಪಕ್ಷದ ಜವಾಬ್ದಾರಿಯನ್ನು ಹೊತ್ತು ನಿಷ್ಠೆಯಿಂದ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಮುಂಬರುವ ದಿನಗಳಲ್ಲಿ ಒಳ್ಳೆಯ ಸ್ಥಾನ ಸಿಗಬೇಕೆನ್ನುವುದು ನಮ್ಮೆಲ್ಲರ ನಿರೀಕ್ಷೆಯಾಗಿದೆ. ಹೈಕಮಾಂಡ್ ಈ ಸಂಬಂಧ ಸೂಕ್ತ ನಿರ್ಧಾರ ತೆಗೆದುಕೊಳ್ಳುತ್ತದೆ ಎಂಬ ವಿಶ್ವಾಸ ನಮಗಿದೆ ಎಂದು ಹೇಳಿದರು.

**ಹಿರಿಯರಿಗೂ ಸಚಿವ ಸ್ಥಾನ ಸಿಗಲಿ: ಗುಂಡೂರಾವ್**

ಪಕ್ಷದಲ್ಲಿರುವ ತಾವೊಬ್ಬರೇ ಖಾಯಂ ಸಚಿವರಾಗಿರಬೇಕು ಎಂದೇನಿಲ್ಲ. ಸಾಕಷ್ಟು ಮಂದಿ

» ನಾಲ್ಕನೇ ಪುಟದಲ್ಲಿ

# ಸೇವಾ ನೂನ್ಯತೆ: 29 ಲಕ್ಷ ರೂ. ದಂಡ ವಿಧಿಸಿ ಆದೇಶ

• ಪ್ರಜೋದಯ ವರದಿ

**ಹಾಸನ:** ಸಿಲಿಂಡರ್ ಸೋರಿಕೆಯಾಗಿ ಮನೆಯ ಸಾಮಾಗ್ರಿಗಳೆಲ್ಲಾ ಬೆಂಕಿಗಾಹುತಿಯಾದರೂ ಪರಿಹಾರ ಪಾವತಿಸದ ಮಂಗಳೂರಿನ ಎಲ್‌ಪಿಜಿ ಟೆರಿಟೊರಿಟಿಗೆ 27 ಲ.ರೂ. ಹಾಗು ಎಸ್‌ಬಿಐ ಜನರಲ್ ಇನ್ಸೂರೆನ್ಸ್‌ಗೆ 2 ಲ. ರೂ. ದಂಡ ವಿಧಿಸಿ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಆದೇಶಿಸಿದೆ.

ಅರಸೀಕೆರೆ ನಗರದ ಚನ್ನಬಸಪ್ಪ ಅವರ ಮನೆಯಲ್ಲಿ 2023ರ ಅ.10 ರಂದು ಅವಘಡ ಸಂಭವಿಸಿತ್ತು. ಅರಸೀಕೆರೆಯ ಕುಸುಮ ಗ್ಯಾಸ್ ಏಜೆನ್ಸಿಯಿಂದ ಸಿಲಿಂಡರ್ ಪಡೆದಿದ್ದ ಚನ್ನಬಸಪ್ಪ ಅವರು ನ್ಯಾಯಕ್ಕಾಗಿ ಆಯೋಗದ ಮೆಟ್ಟಿಲೇರಿದ್ದರು. ಗ್ಯಾಸ್ ಸೋರಿಕೆಯಿಂದ ಚನ್ನಬಸಪ್ಪ ಅವರ ಪತ್ನಿಗೆ ಬೆಂಕಿ ತಗುಲಿ ಗಾಯಗೊಂಡಿದ್ದಾರೆ. ಜೊತೆಗೆ ಮನೆ ತುಂಬಾ ಬೆಂಕಿ ಹೊತ್ತಿ 15,000 ತೆಂಗಿನ ಕಾಯಿ ಸುಟ್ಟು ಹೋಗಿದ್ದವು. ಜೊತೆಗೆ 3 ಅಲ್ಮೇರಾ, ಟಿ.ವಿ. ರೆಫ್ರಿಜಿರೇಟರ್, ಫರ್ನಿಚರ್, ಪಾತ್ರೆ, ತರಕಾರಿ ಪದಾರ್ಥ, 105 ಗ್ರಾಂ ಚಿನ್ನ,

- ಹೋರಾಟದಲ್ಲಿ ಗೆದ್ದ ಅರಸೀಕೆರೆಯ ಚನ್ನಬಸಪ್ಪ
- ಎಲ್‌ಪಿಜಿ ಟೆರಿಟೊರಿಟಿಗೆ ಮುಖಭಂಗ

500 ಗ್ರಾಂ ಬೆಳ್ಳಿ ಹಾಗು ಅಲ್ಮೇರಾದಲ್ಲಿದ್ದ 1 ಲಕ್ಷ ರೂ. ನಗದು ಸುಟ್ಟು ಕರಕಲಾಗಿ ಮನೆ ಗೋಡೆಗಳು ಸಹ ಬಿರುಕು ಬಿಟ್ಟಿದ್ದವು.

ಈ ಅನಾಹುತಕ್ಕೆ ಕಳಪೆ ಸಿಲಿಂಡರ್, ರೆಗ್ಯೂಲೇಟರ್ ಮತ್ತು ಪೈಪ್ ಕಾರಣವೆಂದು ಆರೋಪಿಸಿದ್ದ ಚನ್ನಬಸಪ್ಪ ಬಾಣಾವರ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಸ್ಥಳಕ್ಕೆ ಭೇಟಿ ನೀಡಿದ್ದ ಅಗ್ನಿಶಾಮಕ ದಳದ ಅಧಿಕಾರಿಗಳು ಸುಮಾರು 29 ಲ.ರೂ. ವರೆಗೆ ನಷ್ಟವಾಗಿದೆ ಎಂದು ವರದಿ ನೀಡಿದ್ದರು. ಅದೇ ರೀತಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮತ್ತು ಗ್ರಾಮ ಲೆಕ್ಕಾಧಿಕಾರಿ ಸಹ ಅದೇ ರೀತಿ ಹೇಳಿದ್ದರು.

**49 ಲಕ್ಷ ರೂ. ಪಾವತಿಗೆ ಮನವಿ**

ಸಿಲಿಂಡರ್ ಎಡವಟ್ಟಿನಿಂದ ಇಷ್ಟೆಲ್ಲಾ ಸಮಸ್ಯೆಯಾಗಿರುವುದು ಗೊತ್ತಿದ್ದರೂ ಕಂಪನಿಯವರು ವಿಮೆ ಅಥವಾ ಪರಿಹಾರ ನೀಡಲು ಹಿಂದೇಟು ಹಾಕಿದ್ದರು. ತಮಗೆ 49.75 ಲಕ್ಷ ರೂ. ಕೊಡಿಸಬೇಕೆಂದು ಚನ್ನಬಸಪ್ಪ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗಕ್ಕೆ 2025ರ ಮೇ 27 ರಂದು ದೂರು ಸಲ್ಲಿಕೆಯಾಗಿತ್ತು.

**ಆರೋಪ ಅಲ್ಲಗಳೆದಿದ್ದ ಕಂಪನಿ**

ಆಯೋಗದ ಎದುರು ವಿಚಾರಣೆಗೆ ಹಾಜರಾಗಿದ್ದು ಗ್ಯಾಸ್ ಏಜೆನ್ಸಿಯವರು ತಾವು ಕೇವಲ ಕಮಿಷನ್ ಆಧಾರದ ಮೇಲೆ ಸಿಲಿಂಡರ್ ಸರಬರಾಜು ಮಾಡುವ ಮಧ್ಯವರ್ತಿಯಾಗಿ ಕೆಲಸ ಮಾಡುತ್ತೇವೆ. ಅವಘಡದ ವಿಡೀಯೋ ತುಣುಕಗಳ ಪ್ರಕಾರ ಮೊದಲು ತೆಂಗಿನ ರಾಶಿಯಿಂದ ಬೆಂಕಿ ಹೊತ್ತಿ ನಂತರ ಅಡುಗೆ ಮನೆಗೆ ಆವರಿಸಿದೆ. ಅದರಿಂದ ಉಂಟಾದ ಉಷ್ಣಾಂಶದಿಂದ ಸಿಲಿಂಡರ್ ಸ್ಫೋಟಗೊಂಡಿರಬಹುದೇ ವಿನಃ ಗ್ಯಾಸ್

» ನಾಲ್ಕನೇ ಪುಟದಲ್ಲಿ

# ರಸ್ತೆಯಲ್ಲಿ ಕಾಡಾನೆ ಭೀಮ ಸಂಚಾರ : ಆತಂಕ


• ಪ್ರಜೋದಯ ವರದಿ

**ಬೇಲೂರು:** ತಾಲ್ಲೂಕಿನ ಬಿಕ್ಕೋಡು ಗ್ರಾಮದಲ್ಲಿ ಬೆಳ್ಳಂಬೆಳಿಗ್ಗೆ ರಸ್ತೆಯಲ್ಲಿ ಕಾಡಾನೆ ಭೀಮ ಕಾಣಿಸಿಕೊಂಡು ಕೆಲ ಕಾಲ ಭಯದ ವಾತಾವರಣ ನಿರ್ಮಾಣಗೊಂಡಿತ್ತು.

ಕಾಡಾನೆ ನಡೆದುಕೊಂಡು ಬರುವುದನ್ನು ಕಂಡ ಕೂಡಲೇ ವಾಹನ ಸವಾರರು ವಾಹನಗಳನ್ನು ನಿಲ್ಲಿಸಿಕೊಂಡು ನಿಂತಿದ್ದಾರೆ. ಜನರನ್ನು ಕಂಡ ಭೀಮ ರಸ್ತೆ ದಾಟಿ ಕಾಫಿ ಎಸ್ಟೇಟ್‌ನ ಒಳಗೆ ಹೋಗಲು ಯತ್ನಿಸಿದೆ. ಎಸ್ಟೇಟ್‌ನ ಗೇಟ್ ಹಾಕಿದ್ದು, ಭೀಮ ಗೇಟ್ ತಳ್ಳಿಕೊಂಡು ಕಾಫಿ ತೋಟದೊಳಗೆ ಹೋಗಿದ್ದು, ಈ ದೃಶ್ಯ ಸ್ಥಳೀಯರ ಮೊಬೈಲ್‌ನಲ್ಲಿ ಸೆರೆಯಾಗಿದೆ. ಕಾಫಿ ತೋಟದೊಳಗೆ ಹೋದ ಕಾಡಾನೆ ಸಣ್ಣ ಮರ ಮುರಿದು ತಿನ್ನುತ್ತಾ ನಿಂತಿದೆ. ಭೀಮಾ ಸೌಮ್ಯ ಸ್ವಭಾವದ ಗುಣ ಹೊಂದಿರುವುದರಿಂದ ಸ್ಥಳೀಯರು ಹತ್ತಿರದಿಂದಲೇ ನಿಂತು ವೀಕ್ಷಿಸಿದ್ದಾರೆ.

**ಹಲವೆಡೆ ಕಾಡಾನೆ ಗುಂಪು**

ಬೇಲೂರು ತಾಲ್ಲೂಕಿನ ಹರೀಶ್ ಅವರ ತೋಟ ಕಣದೂರು, ತಿಮ್ಮೇಗೌಡರ ತೋಟ ಜಾಕನಹಳ್ಳಿ, ಕೃಷ್ಣೆಗೌಡರ ತೋಟ, ಲಾಯರ್ ಪ್ರಭಾಕರ್ ಅವರ ತೋಟ ಚೀಕನಹಳ್ಳಿ, ನಿಂಗರಾಜು ಅವರ ಕಾಡು



ಬಾಲಗುಳಿ ನಿಯರ್ ಐಬಿಸಿ ಎಸ್ಟೇಟ್ ಇಂದ್ರಗಿರಿ ಎಸ್ಟೇಟ್, ಬೇಡಿ ಎಸ್ಟೇಟ್ ಕೂಗೋಡು, ನೇರಳಮಕ್ಕಿ ಗ್ರಾಮದ ಕಾನಳ್ಳಿ ಫಾರೆಸ್ಟ್ ಮತ್ತು ತಾರಾನಾಥ್ ಅವರ ತೋಟ, ಅಶೋಕ್ ಗೌಡರ ತೋಟ ಮತ್ತು ನಂದಿ ಎಸ್ಟೇಟ್ ಚೀಕನಹಳ್ಳಿ ಸುತ್ತಮುತ್ತ ಕಾಡಾನೆಗಳು ಕಂಡು ಬಂದಿವೆ.

ಸಕಲೇಶಪುರ ತಾಲ್ಲೂಕಿನ ಗುಡ್ಡೆ ಬೆಟ್ಟ ಎಸ್ಟೇಟ್ ಕೆಸಗುಲಿ ಮತ್ತು ಪಿಂಟೋ ಎಸ್ಟೇಟ್, ಇಬ್ಬಡಿ ರಾಮಚಂದ್ರ ಅವರ ತೋಟ ಕಲ್ಗಂಡಿ, ಗುಡ್ ಬೆಟ್ಟ ಎಸ್ಟೇಟ್ ಉದೇವರ, ನಜೀರ್ ಸಾಬ್ರುತೋಟ ಮತ್ತು ಯೂನಸ್ ಅವರ ತೋಟ ಹಲ್ಲೇಮಕ್ಕಿ ಸುತ್ತಮುತ್ತ ಕಾಡಾನೆಗಳು ಕಾಣಿಸಿಕೊಂಡಿವೆ. ಹೆತ್ತೂರು ಮತ್ತು ಯಸಳೂರು ಹೋಬಳಿಯ ಕರಡಿಗಾಲ ಮತ್ತು ಚಿನ್ನಹಳ್ಳಿ ಗ್ರಾಮದ ಸಿರಿಮನೆ ಮತ್ತು ಭೂತಾರ್ ಉಡುವೆ, ಹಾಡ್ಲಾಹಳ್ಳಿ ಗ್ರಾಮದ ಬಸರಿ ಹಡ್ಲು, ಜೆಡಿಗದ್ದೆ, ಐಗೂರು ನಿರ್ಮಾ ಎಸ್ಟೇಟ್ (ರಾಟೆಮನೆಕೆರೆ ), ಹಾಡ್ಲುಗದ್ದೆ ಮತ್ತು ಬಿಸ್ಲೆ ಗ್ರಾಮದ ತಾರೆಕೋಲು, ನಾಗೇನಹಳ್ಳಿ ಗ್ರಾಮದ ಕಾರೆ ಕೊಪ್ಪಲು ಬೆಟ್ಟ, ಬಾಚಿಹಳ್ಳಿ ಗ್ರಾಮದ ಬಿಲ್ಲುದಿಣ್ಣೆ, ತಂಬಲಗೇರಿ ಗ್ರಾಮದ ಎಳರ್ ಗದ್ದೆ ಸುತ್ತಮುತ್ತ ಕಾಡಾನೆಗಳು ಬೀಡುಬಿಟ್ಟಿವೆ.

**ಅರಕಲಗೂಡು**

ತಾಲ್ಲೂಕಿನ ಬಾಗದಾಳು ಮತ್ತು ಮಲ್ಲಿಪಟ್ಟಣದ ಕಾಫಿ ತೋಟ-ಗದ್ದೆಗಳಲ್ಲಿ ಕಾಡಾನೆಗಳು ಓಡಾಡುತ್ತಿದ್ದು ಸ್ಥಳೀಯರು ಆತಂಕಕ್ಕೆ ಒಳಗಾಗಿದ್ದಾರೆ. ಸೋಮವಾರ ಸಂಜೆ ರಸ್ತೆಯಲ್ಲಿ ಆನೆಗಳು ಸಂಚರಿಸುವ ದೃಶ್ಯ ಮೊಬೈಲ್ ಕ್ಯಾಮರಾದಲ್ಲಿ ಸೆರೆಯಾಗಿದೆ. ಬೇಲೂರು, ಸಕಲೇಶಪುರ ಭಾಗದಲ್ಲಿ ಓಡಾಡಿಕೊಂಡಿದ್ದ ಕಾಡಾನೆಗಳು ಆಹಾರ ಅರಸಿ ಅರಕಲಗೂಡು ಭಾಗಕ್ಕೆ ಲಗ್ಗೆ ಇಟ್ಟಿವೆ. ಬೆಳೆಗಳೆಲ್ಲಾ ಹಾಳಾಗುವ ಭೀತಿ ರೈತರನ್ನು ಕಾಡುತ್ತಿದೆ. ಅರಣ್ಯ ಇಲಾಖೆ ಕೂಡಲೇ ಆನೆಗಳನ್ನು ಸ್ಥಳಾಂತರಿಸಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.



# ಕಾಳಸಂತೆಯಲ್ಲಿ ಸಿಲಿಂಡರ್ ಮಾರಾಟಕ್ಕೆ ಬೀಳದ ಕಡಿವಾಣ

## ಬುಕ್ಕಿಂಗ್ ಆದರೂ ಸಿಗುವುದಿಲ್ಲ ಅಡುಗೆ ಅನಿಲ | ಭಾರತ್ ಗ್ಯಾಸ್ ಏಜೆನ್ಸಿ ದೋಖಾ

-ಮಲ್ಲಿಕಾರ್ಜುನ ಕೊಚ್ಚರಗಿ

• ಪ್ರಜೋದಯ ವರದಿ

**ಹಾಸನ:** ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿ ನಡೆಯುತ್ತಿರುವ ಯುದ್ಧದಿಂದಾಗಿ ಗ್ಯಾಸ್ ಸಿಲಿಂಡರ್ ಪೂರೈಕೆಯಲ್ಲಿ ವ್ಯತ್ಯಯ ವಾಗುತ್ತಿದೆಯೆಂಬ ನೆಪವನ್ನೇ ಅಸ್ತ್ರವಾಗಿಸಿಕೊಂಡಿರುವ ಗ್ಯಾಸ್ ಏಜೆನ್ಸಿಗಳು ಗ್ರಾಹಕರಿಗೆ ಮೋಸ ಎಸಗುತ್ತಿರುವ ಪ್ರಕರಣ ಹೆಚ್ಚಾಗಿದೆ.

ಗ್ಯಾಸ್ ಸಿಲಿಂಡರ್ ಪೂರೈಕೆ ಕಡಿಮೆಯಾಗುತ್ತಿರುವ ಹಿನ್ನಲೆಯಲ್ಲಿ ಅಧಿಕ ಬೆಲೆಗೆ ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿರುವುದು ದೃಢಪಟ್ಟಿದೆ. ನಗರದ ಡಾ.ಬಿ.ಆರ್. ಅಂಬೇಡ್ಕರ್ ಭವನದ ರಸ್ತೆಯಲ್ಲಿರುವ ಭಾರತ್ ಗ್ಯಾಸ್ ಏಜೆನ್ಸಿಯವರು ಒಂದೂವರೆ ತಿಂಗಳ ಹಿಂದೆ ಬುಕ್ಕಿಂಗ್ ಆದವರಿಗೆ ಇನ್ನೂ ಸಿಲಿಂಡರ್ ನೀಡಿದೆ ಪ್ರತಿ ದಿನ ಒಂದೊಂದು ನೆಪ ಹೇಳಿ ವಾಪಾಸ್ ಕಳುಹಿಸುತ್ತಿದ್ದಾರೆಂಬ ಗಂಭೀರ ಆರೋಪ ಕೇಳಿಬಂದಿದೆ.

**ಯಾರದೋ ಸಿಲಿಂಡರ್ ಮತ್ಯಾರಿಗೋ ಮಾರಾಟ**

ಮಾರ್ಚ್‌ನಲ್ಲಿ ಮೊಬೈಲ್‌ನಲ್ಲಿ



ಗ್ಯಾಸ್ ಬುಕ್ ಮಾಡಿದವರಿಗೆ ಇನ್ನೂ ಸಿಲಿಂಡರ್ ಸಿಕ್ಕಿಲ್ಲ. ಈ ಬಗ್ಗೆ ಪ್ರತಿ ನಾಲ್ಕೈದು ದಿನಕ್ಕೊಮ್ಮೆ ವಿಚಾರಿಸಿದಾಗ ಲೋಡ್ ಇಲ್ಲ, ಬುಕ್ಕಿಂಗ್ ಆಗುತ್ತಿಲ್ಲ. ನಾಲ್ಕು ದಿನ ಬಿಟ್ಟು ಬನ್ನಿರಿ ಎನ್ನುತ್ತಾರೆ. ಸಿಬ್ಬಂದಿ ಜೊತೆಗೆ ಜಗಳ ಬೇಡವೆಂದು ಮರು ಮಾತನಾಡದೆ ವಾಪಾಸ್ ಹೋಗುತ್ತಾರೆ. ಹೀಗೆ ಪ್ರತಿ ದಿನವೂ ನಡೆಯುತ್ತಿದೆ. ಅಸಲಿಗೆ ಲೋಡ್ ಬಂದಿಲ್ಲ, ಬುಕ್ಕಿಂಗ್ ಆಗುತ್ತಿಲ್ಲವೆಂಬುದು ಸಿಬ್ಬಂದಿಯ ಕಟ್ಟುಕಥೆ ಎಂಬುದು ರುಜುವಾತಾಗಿದೆ.

ಮಾರ್ಚ್ ಮೊದಲ ವಾರದಲ್ಲಿ ಬುಕ್ಕಿಂಗ್ ಮಾಡಿದವರಿಗೆ ಆಗಲೇ ಬುಕ್ಕಿಂಗ್ ಆಗಿ ಸಿಲಿಂಡರ್ ವಿತರಣೆಯೂ ಆಗಿದೆ. ಆದರೆ, ಮೂಲ ಗ್ರಾಹಕರಿಗೆ ತಲುಪದೆ ಕಾಳಸಂತೆಯಲ್ಲಿ ಮಾರಾಟವಾಗಿರುವುದು ದೃಢಪಟ್ಟಿದೆ. ಈ ಬಗ್ಗೆ ಕಚೇರಿ ತೆರಳಿ ವಿಚಾರಿಸಿದಾಗ ನಮ್ಮಿಂದ ಯಾವ ತಪ್ಪುಗಳಾಗಿಲ್ಲ. ಡಿಲೆವರಿ ಬಾಯ್‌ಗಳೇ ಯಾರಿಗೋ ಮಾರಾಟ ಮಾಡಿದ್ದಾರೆಂದು ಹಾರಿಕೆಯ ಉತ್ತರ ನೀಡಿದ್ದಾರೆ. ಹಾಗಾದರೆ ಗ್ರಾಹಕರು ಬುಕ್ಕಿಂಗ್ ಮಾಡಿದ ಮೇಲೆ ನಾಲ್ಕೈದು ಸಲ ಭೇಟಿ ಮಾಡಿದಾಗಲೇ ಸಿಲಿಂಡರ್ ವಿತರಣೆಯಾಗಿದೆ ಎಂಬ ಸತ್ಯ ಹೇಳಬಹುದಿತ್ತು. ಹೇಗಾದರೂ ಮಾಡಿ 25 ದಿನ ತಳ್ಳಿದರೆ ಮತ್ತೊಮ್ಮೆ ಬುಕ್ಕಿಂಗ್ ಮಾಡಿ ಆ ಸಿಲಿಂಡರ್ ಅನ್ನು ಕೊಟ್ಟು ಸುಮ್ಮನಾಗಿಸಬಹುದು ಎನ್ನುವುದು ಭಾರತ್ ಗ್ಯಾಸ್‌ನವರ ಲೆಕ್ಕಾಚಾರವಾಗಿದೆ.

ಹಲೋ ಬಿಪಿಸಿಎಲ್ ಆ್ಯಪ್‌ನಲ್ಲಿ

> **ಕಾನೂನು ಬಾಹಿರವಾಗಿ ಸಿಲಿಂಡರ್ ಮಾರಾಟ ಮಾಡಿದ ಪ್ರಕರಣಕ್ಕೆ ಸಂಬಂಧಿಸಿ ಈ ವರೆಗೆ ಜಿಲ್ಲೆಯಲ್ಲಿ 7 ಎಫ್‌ಐಆರ್ ದಾಖಲಾಗಿದೆ. ಬುಕ್ಕಿಂಗ್ ಆದವರಿಗೆ ಸಿಲಿಂಡರ್ ನೀಡದೆ ಬೇರೆ ಕಡೆ ಮಾರಾಟ ಮಾಡುತ್ತಿರುವ ಕುರಿತು ದೂರು ಕೇಳಿ ಬಂದಿದ್ದು, ಕಾರಣ ಕೇಳಿ ನೋಟೀಸ್ ಜಾರಿ ಮಾಡಲಾಗುವುದು. ಆರೋಪ ಸಾಬೀತಾದರೆ ಮುಲಾಜಿಲ್ಲದೆ ಶಿಸ್ತು ಕ್ರಮ ಜರುಗಿಸಲಾಗುವುದು.**
> **-ಅರುಣ್‌ಕುಮಾರ್ ಸಂಗಾವಿ, ಆಹಾರ ಇಲಾಖೆ ಉಪನಿರ್ದೇಶಕ**

ಸಿಲಿಂಡರ್ ಬುಕ್ ಆಗಿರುವ, ಪೂರೈಕೆ ಆಗಿರುವ ಅಥವಾ ರದ್ದಾಗಿರುವ ಕುರಿತು ಎಲ್ಲಾ ಮಾಹಿತಿಯೂ ಲಭ್ಯವಾಗುತ್ತದೆ. ಆದರೆ, ಬಹುತೇಕರಿಗೆ ಈ ವಿಚಾರ ತಿಳಿದೇ ಇಲ್ಲ. ಸಿಬ್ಬಂದಿ ಹೇಳುವುದೇ ನಿಜವೆಂದು ಸುಮ್ಮನಾಗುವ ಪರಿಸ್ಥಿತಿ ನಿರ್ಮಾಣವಾಗಿದೆ.

**ಗಲಾಟೆ ಮಾಡಿದರೆ ಮನೆಗೆ ಸಿಲಿಂಡರ್**

ಭಾರತ್ ಗ್ಯಾಸ್‌ನಲ್ಲಿ ನ್ಯಾಯಯುತವಾಗಿ ಸಿಲಿಂಡರ್ ಪಡೆಯಬೇಕೆಂದರೆ ಕಚೇರಿಯಲ್ಲಿ ಪ್ರತಿ ದಿನ ಜಗಳ ಮಾಡಲೇಬೇಕೆಂಬ ಪರಿಸ್ಥಿತಿ ನಿರ್ಮಾಣವಾಗಿದೆ. ಅನಕ್ಷರಸ್ಥ ಮಹಿಳೆಯರು, ವೃದ್ಧರಿಗೆ ಇಲ್ಲಸಲ್ಲದ ಕಾರಣಗಳನ್ನು ಹೇಳಿ ಖಾಲಿ ಕೈಯಲ್ಲಿ ವಾಪಾಸ್ ಕಳುಹಿಸುವ ಸಿಬ್ಬಂದಿಯು ಯಾರಾದರೂ ಜೋರಾಗಿ ಮಾತನಾಡಿದರೆ ಗರದಿರಿಸಿದರೆ ಅಂತಹವರಿಗೆ ಮರು ಮಾತಿಲ್ಲದೆ ಬಿಲ್ ಕೊಡುವ ಅಥವಾ ಮನೆಗೆ ಸಿಲಿಂಡರ್ ತಲುಪಿಸುವ ವ್ಯವಸ್ಥೆ ಮಾಡಿಕೊಂಡಿದ್ದಾರೆ.

**ಕಾಳಸಂತೆಯಲ್ಲಿ 2500 ರೂ.ಗೆ ಮಾರಾಟ**

ಸಿಲಿಂಡರ್‌ಗೆ ಹೋಟೆಲ್‌ಗಳಲ್ಲಿ ಬೇಡಿಕೆ ಹೆಚ್ಚಿರುವುದರಿಂದ ತಲಾ 2500 ರೂ.ಗೆ ಒಂದು ಸಿಲಿಂಡರ್ ಮಾರಾಟ ಮಾಡುತ್ತಿದ್ದಾರೆ. ಅದರಲ್ಲಿ ಡಿಲೆವರಿ ಬಾಯ್, ಕಚೇರಿ ಸಿಬ್ಬಂದಿಯದ್ದು ನೇರ ಪಾತ್ರವಿದೆ. ಈ ರೀತಿಯ ಅಕ್ರಮಕ್ಕೆ ಕಡಿವಾಣ ಹಾಕಬೇಕೆಂದು ಜಿಲ್ಲಾಡಳಿತ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಎಷ್ಟೇ ಪ್ರಯತ್ನಪಟ್ಟರೂ ಸಾಧ್ಯವಾಗುತ್ತಿಲ್ಲ.

# ಪಶು ವೈದ್ಯಕೀಯ ಕಾಲೇಜಿನಲ್ಲಿ ರ‍್ಯಾಗಿಂಗ್ ಗಲಾಟೆ

• ಪ್ರಜೋದಯ ವರದಿ

**ಹಾಸನ:** ನಗರ ಸಮೀಪದ ಚಿಕ್ಕಹೊನ್ನೇನಹಳ್ಳಿಯಲ್ಲಿರುವ ಪಶು ವೈದ್ಯಕೀಯ ಕಾಲೇಜಿನ ಹಾಸ್ಟೆಲ್‌ನಲ್ಲಿ ರ‍್ಯಾಗಿಂಗ್ ನಡೆಸಿದ ವಿಚಾರಕ್ಕೆ ಹಿರಿಯ ಹಾಗು ಕಿರಿಯ ವಿದ್ಯಾರ್ಥಿಗಳ ನಡುವೆ ಮಾರಾಮಾರಿ ನಡೆದಿದೆ.

ಹಾಸ್ಟೆಲ್‌ನಲ್ಲಿದ್ದ ಹಿರಿಯ ವಿದ್ಯಾರ್ಥಿಗಳ ಗುಂಪೊಂದು, ಕಿರಿಯ ವಿದ್ಯಾರ್ಥಿಗಳಿಗೆ ರ‍್ಯಾಗಿಂಗ್ ನಡೆಸಿದ್ದಾರೆಂಬ ಆರೋಪ ಕೇಳಿ ಬಂದಿದೆ. ಈ ನಡೆಗೆ ವಿರೋಧ ವ್ಯಕ್ತಪಡಿಸಿದ ಕಿರಿಯ ವಿದ್ಯಾರ್ಥಿಗಳನ್ನು ಗುರಿಯಾಗಿಸಿಕೊಂಡು ಹಿರಿಯ ವಿದ್ಯಾರ್ಥಿಗಳು



ಹಲ್ಲೆ ನಡೆಸಿದ್ದಾರೆ. ಈ ವೇಳೆ ಎರಡು ಗುಂಪುಗಳ ನಡುವೆ ಜೋರು ಗಲಾಟೆ ನಡೆದಿದ್ದು, ಹಲವು ವಿದ್ಯಾರ್ಥಿಗಳು ಗಾಯಗೊಂಡು, ಕೆಲವರಿಗೆ ಸಣ್ಣಪುಟ್ಟ ಗಾಯಗಳಾಗಿವೆ.

ಹಲ್ಲೆಗೆ ಒಳಗಾದ ವಿದ್ಯಾರ್ಥಿಗಳು ಕಾಲೇಜಿನ ಡೀನ್ ನಟರಾಜ್ ಅವರಿಗೆ ದೂರು ಸಲ್ಲಿಸಿದ್ದು, ಘಟನೆ ಕುರಿತು ತನಿಖೆ ನಡೆಸಲು ಕಾಲೇಜು ಆಡಳಿತ ಮಂಡಳಿ ಸಮಿತಿ ರಚಿಸಲು ಮುಂದಾಗಿದೆ. ಸಮಿತಿಯ ವರದಿ ಬಂದ ಬಳಿಕ ಸಂಬಂಧಪಟ್ಟವರ ಮೇಲೆ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದ್ದಾರೆ. ಈ ಸಂಬಂಧ ಬಡಾವಣೆ ಠಾಣೆ ಪೊಲೀಸರು ಕಾಲೇಜಿಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಿದ್ದಾರೆ. ವಿದ್ಯಾರ್ಥಿಗಳು ಈವರೆಗೆ ಪೊಲೀಸ್ ಠಾಣೆಯಲ್ಲಿ ಅಧಿಕೃತ ದೂರು ದಾಖಲಿಸಲು ಮುಂದಾಗಿಲ್ಲ. ವಿದ್ಯಾರ್ಥಿಗಳು ಬಡಿದಾಡಿ ಕೊಳ್ಳುವ ದೃಶ್ಯಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಈ ಬಗ್ಗೆ ಪೋಷಕರು, ಸಾರ್ವನಿಕರು ಕಳವಳ ವ್ಯಕ್ತಪಡಿಸಿದ್ದಾರೆ. ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವ ಜೊತೆಗೆ ಕಾಲೇಜು ಅಥವಾ ಹಾಸ್ಟೆಲ್‌ನಲ್ಲಿ ಅಹಿತಕರ ಘಟನೆಗಳು ನಡೆಯಲು ಅವಕಾಶ ನೀಡದಂತೆ ಒತ್ತಾಯಿಸಿದ್ದಾರೆ.

## ವಿದ್ಯುತ್ ತಗುಲಿ ಯುವಕ ಮೃತ

• ಪ್ರಜೋದಯ ವರದಿ

ಆಲೂರು : ಆಕಸ್ಮಿಕವಾಗಿ ವಿದ್ಯುತ್ ತಗುಲಿ ಯುವಕ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಹುಣಸವಳ್ಳಿ ಗ್ರಾಮದಲ್ಲಿ ನಡೆದಿದೆ. ಕುಪೇಂದ್ರ ಅವರ ಪುತ್ರ ರಾಕೇಶ್ (27) ಮೃತ ದುರ್ದೈವಿ.

ಜಮೀನಿನಲ್ಲಿದ್ದ ತೆಂಗಿನ ಗಿಡಗಳಿಗೆ ನೀರು ಹಾಯಿಸುತ್ತಿದ್ದ ವೇಳೆ ಮೋಟಾರು ಏಕಾಏಕಿ ಸ್ಥಗಿತಗೊಂಡ ಕಾರಣ ಮೋಟಾರ್ ಸ್ಟಾರ್ಟರ್ ಬಳಿ ತೆರಳಿ ಪರಿಶೀಲನೆ ನಡೆಸುವಾಗ ಆಕಸ್ಮಿಕವಾಗಿ ವಿದ್ಯುತ್ ಸ್ಪರ್ಶಿಸಿ ರಾಕೇಶ್ ಪ್ರಜ್ಞೆ ತಪ್ಪಿ ಸ್ಥಳದಲ್ಲೇ ಬಿದ್ದಿದ್ದಾರೆ. ಕುಟುಂಬಸ್ಥರು ತಾಲ್ಲೂಕು ಆಸ್ಪತ್ರೆಗೆ ಕರೆದೊಯ್ದಿದ್ದಾರೆ. ಪರೀಕ್ಷಿಸಿದ ವೈದ್ಯರು ರಾಕೇಶ್ ಮೃತಪಟ್ಟಿರುವುದನ್ನು ದೃಢಪಡಿಸಿದರು. ಮರಣೋತ್ತರ ವೈದ್ಯಕೀಯ ಪರೀಕ್ಷೆ ನಡೆಸಿ ವಾರಸುದಾರರಿಗೆ ಹಸ್ತಾಂತರಿಸಲಾಯಿತು. ಈ ಸಂಬಂಧ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಮೆದುಳಿನಲ್ಲಿ ರಕ್ತಸ್ರಾವ: ಯುವತಿ ಹಠಾತ್ ಸಾವು

• ಪ್ರಜೋದಯ ವರದಿ

**ಹಾಸನ:** ಮೆದುಳಿನಲ್ಲಿ ತೀವ್ರ ರಕ್ತಸ್ರಾವವಾಗಿ ಕೋಮಾಗೆ ಜಾರಿದ್ದ ಸಾಫ್ಟ್‌ವೇರ್ ಇಂಜಿನೀಯರ್ ಚಿಕಿತ್ಸೆಗೆ ಸ್ಪಂದಿಸದೆ ಮೃತ ಪಟ್ಟಿದ್ದಾರೆ.

ಬೇಲೂರು ತಾಲ್ಲೂಕಿನ ಬಂಡಿಲಕ್ಕನ ಕೊಪ್ಪಲು ಗ್ರಾಮದ ಗಂಗಾಧರ್ ಮತ್ತು ಸರೋಜ ದಂಪತಿಯ ಪುತ್ರಿಯಾದ ಶ್ವೇತಾ(25) ಸಾವನ್ನಪ್ಪಿ ದ್ದಾರೆ. ಶ್ವೇತಾ ಮ್ಯಾಗ್ನಾ ಸಾಫ್ಟ್ ಕಂಪನಿಯಲ್ಲಿ ಕಳೆದ 3 ವರ್ಷಗಳಿಂದ ಸಾಫ್ಟ್‌ವೇರ್ ಇಂಜಿನೀ ಯರ್ ಆಗಿ ಕೆಲಸ ಮಾಡುತ್ತಿದ್ದರು. ಏ.25ರ ಸಂಜೆ ಮನೆಯಲ್ಲಿದ್ದಾಗ ಶ್ವೇತಾ ಹಠಾತ್ತಾಗಿ ಕುಸಿದು ಬಿದ್ದಿದ್ದರು. ಕುಟುಂಬಸ್ಥರು ಆಕೆಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಆಸ್ಪತ್ರೆಗೆ ತಲುಪುವ ವೇಳೆಗೆ ಶ್ವೇತಾ ಕೋಮಾಗೆ ಜಾರಿದ್ದರು. ಪರೀಕ್ಷಿಸಿದ ವೈದ್ಯರು ಮೆದುಳಿನಲ್ಲಿ ತೀವ್ರ ರಕ್ತಸ್ರಾವವಾಗಿ ರುವ ಬಗ್ಗೆ ಮಾಹಿತಿ ನೀಡಿ, ಚಿಕಿತ್ಸೆ ವೇಳೆ ಮೆದುಳು ಸಂಪೂರ್ಣ ನಿಷ್ಕ್ರಿಯ ಗೊಂಡ ಶ್ವೇತಾ ಸಾವನ್ನಪ್ಪಿ ದ್ದಾರೆ.



ಮಗಳ ಸಾವಿನ ನೋವಿನ ನಡುವೆಯೂ ಪೋಷಕರು ಶ್ವೇತಾ ಅವರ ಅಂಗಾಂಗ ದಾನ ಮಾಡಲು ನಿರ್ಧಾರ ಮಾಡಿದ್ದರು. ಆದರೆ, ಆಕೆಯ ದೇಹದ ಆರೋಗ್ಯದ ಸ್ಥಿತಿಗತಿ ದುರ್ಬಲ ಗೊಂಡಿದ್ದರಿಂದ ಅಂಗಾಂಗ ದಾನ ಸಾಧ್ಯವಾಗಿಲ್ಲ. ಸೋಮವಾರ ಬಂಡಿಲಕ್ಕನ ಕೊಪ್ಪಲು ಗ್ರಾಮದಲ್ಲಿ ಅಂತ್ಯಕ್ರಿಯೆ ನೆರವೇರಿತು. ಮಗಳ ಹಠಾತ್ ಸಾವಿನಿಂದ ಕುಟುಂಬ ಕಂಗಲಾಗಿದ್ದು, ಮ್ಯಾಗ್ನಾ ಸಾಫ್ಟ್ ಕಂಪನಿಯ ಸಹೋದ್ಯೋಗಿಗಳು, ಗ್ರಾಮಸ್ಥರು ಕಂಬನಿ ಮಿಡಿದಿದ್ದಾರೆ.

## ನಾಳೆ ತೆಂಕಲಗೂಡು ಮಠದಲ್ಲಿ ಧಾರ್ಮಿಕ ಕಾರ್ಯಕ್ರಮ

• ಪ್ರಜೋದಯ ವರದಿ

**ಹಾಸನ:** ಸಕಲೇಶಪುರ ತಾಲ್ಲೂಕಿನ ಯಸಳೂರಿನ ತೆಂಕಲಗೂಡು ಬೃಹನ್ಮಠದಲ್ಲಿ ಶ್ರೀ ಚನ್ನಮಲ್ಲಿಕಾರ್ಜುನ ಸ್ವಾಮೀಜಿ 6ನೇ ವರ್ಷದ ಪುಣ್ಯಸ್ಮರಣೆ ಹಾಗು ಚನ್ನಸಿದ್ದೇಶ್ವರ ಸ್ವಾಮೀಜಿ 6ನೇ ವರ್ಷದ ಶ್ರೀ ಗುರು ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ಏ. 29 ರಂದು ಭಕ್ತಿಭಾವದಿಂದ ನಡೆಯಲಿದೆ ಎಂದು ಮಠದ ಚನ್ನಸಿದ್ದೇಶ್ವರ ಸ್ವಾಮೀಜಿ ತಿಳಿಸಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಶಿ ಜಗದ್ಗುರುಗಳ ಇಷ್ಟಲಿಂಗ ಮಹಾಪೂಜೆ, ವೀರಶೈವ ಪಂಚಸೂತ್ರೀಯ ಪ್ರವಚನ ಗ್ರಂಥ, ವೀರಶೈವ ಪದ ದರ್ಶನ ಹಾಗು ಸಿದ್ಧಾಂತ ಶಿಖಾಮಣಿ ಪ್ರಭೆ ಕೃತಿಗಳ ಲೋಕಾರ್ಪಣೆ, ಸಿದ್ಧಾಂತ ಶಿಖಾಮಣಿ ಪ್ರವಚನ-ಜನಜಾಗೃತಿ ಸಮಾವೇಶ ಹಾಗು ಸಾಮೂಹಿಕ ಇಷ್ಟಲಿಂಗ ಶಿವದೀಕ್ಷಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

» ನಾಲ್ಕನೇ ಪುಟದಲ್ಲಿ

## ಪ್ರವಾಸಿಗರ ಸುರಕ್ಷತೆ ದೃಷ್ಟಿಯಿಂದ ಕ್ರಮಕ್ಕೆ ಮುಂದಾದ ಜಿಲ್ಲಾಡಳಿತ

# ಅನಧಿಕೃತ ಹೋಂಸ್ಟೇ ನೋಂದಣಿಗೆ ಗಡುವು

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯಲ್ಲಿ ದಿನೇ ದಿನೇ ಅನಧಿಕೃತ ಹೋಂಸ್ಟೇಗಳು ತಲೆ ಎತ್ತುತ್ತಿರುವುದರಿಂದ ಪ್ರವಾಸಿಗರ ಸುರಕ್ಷತೆ ದೃಷ್ಟಿಯಿಂದ ಜಿಲ್ಲಾಡಳಿತ 15 ದಿನಗಳ ಗಡುವಿನೊಂದಿಗೆ ಹೋಂ ಸ್ಟೇ ಹಾಗು ರೆಸಾರ್ಟ್‌ಗಳ ನೋಂದಣಿಗೆ ಸೂಚಿಸಿದೆ.

ಕೊಡಗು ಜಿಲ್ಲೆಯ ಹೋಂಸ್ಟೇ ಒಂದರಲ್ಲಿ ವಿದೇಶಿ ಮಹಿಳೆ ಮೇಲೆ ಅತ್ಯಾಚಾರ ಪ್ರಕರಣ ಬೆಳಕಿಗೆ ಬರುತ್ತಿದ್ದಂತೆ ಸರ್ಕಾರದ ನಿರ್ದೇಶನದ ಮೇರೆಗೆ ಜಿಲ್ಲಾಡಳಿತ ಕೂಡ ಕಠಿಣ ಕ್ರಮಕ್ಕೆ ಮುಂದಾಗಿದೆ. ಜಿಲ್ಲೆಯಲ್ಲಿ ಪ್ರವಾಸೋದ್ಯಮ ಚಟು ವಟಿಕೆಗಳು ಹೆಚ್ಚಾಗುತ್ತಿವೆ. ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ಅನೇಕ ಹೋಂಸ್ಟೇಗಳು ಹಾಗು ರೇಸಾರ್ಟ್ ಕಾರ್ಯ ನಿರ್ವಹಿಸುತ್ತಿವೆ. ಪ್ರವಾಸಿಗರ ಸುರಕ್ಷತೆ, ಗುಣಮಟ್ಟದ ಸೇವೆ, ಕಾನೂನು ಬದ್ಧ ನಿರ್ವಹಣೆ, ಪ್ರವಾ ಸೋದ್ಯಮ



ಕ್ಷೇತ್ರದ ಸಮಗ್ರ ಅಭಿ ವೃದ್ಧಿಯ ದೃಷ್ಟಿಯಿಂದ ಅನಧಿಕೃತ ಹೋಸ್ಟೇಗಳಿಗೆ ಕಡಿವಾಣ ಹಾಕಲು ಮುಂದಾಗಿದೆ.

ಕರ್ನಾಟಕ ಪ್ರವಾಸೋದ್ಯಮ ವ್ಯಾಪಾರ (ಸೌಲಭ್ಯ ಮತ್ತು ನಿಯಂತ್ರಣ) ಅಧಿನಿಯಮ-2015ರ ಅಧಿನಿಯಮ ಉಪ ಕಂಡಿಕೆ (3)ರ ಅಡಿಯಲ್ಲಿ ನಿಯಮಗಳನ್ನು ರಚಿಸಲಾಗಿದೆ. ಈ ಪ್ರಕಾರ ಯಾವ ವ್ಯಕ್ತಿ ಪ್ರವಾಸೋದ್ಯಮ ಚಟುವಟುಕೆ ನಡೆಸುವ ಸಲುವಾಗಿ ಹೋಂ ಸ್ಟೇ, ರೆಸಾರ್ಟ್ ಸೇರಿ ಇತರೆ ಹೆಸರುಗಳಿಂದ ಪ್ರವಾಸಿಗರಿಗೆ ವಸತಿ ಸೌಲಭ್ಯ ಕಲ್ಪಿಸಲಾಗುತ್ತದೆಯೋ ಅಂತಹ ವ್ಯಕ್ತಿ, ಕರ್ನಾಟಕ ಪ್ರವಾಸೋದ್ಯಮ ಇಲಾಖೆಯಲ್ಲಿ ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳಬೇಕಿದೆ.

**15 ದಿನಗಳಲ್ಲಿ ನೋಂದಣಿಗೆ ಅವಕಾಶ**

ಜಿಲ್ಲೆಯಲ್ಲಿ ಹಲವು ಹೋಂಸ್ಟೇಗಳು ನೋಂದಣಿ ಮಾಡಿಕೊಳ್ಳದೇ ನಿಯಮ ಬಾಹಿರವಾಗಿ ಕೆಲಸ ನಿರ್ವಹಿಸುತ್ತಿವೆ. ಜಿಲ್ಲಾ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಹೋಂಸ್ಟೇ ಮಾಲೀಕರು 15 ದಿನಗಳೊ ಳಗೆ ಆಫ್‌ಲೈನ್ ಮೂಲಕ ನೋಂದಣಿ ಮಾಡಿಕೊಳ್ಳಲು ಜಿಲ್ಲಾಡಳಿತ ಸೂಚಿಸಿದೆ.

> **ಜಿಲ್ಲೆಯಲ್ಲಿ ಹಲವು ಹೋಂಸ್ಟೇಗಳು ನೋಂದಣಿ ಮಾಡಿಕೊಳ್ಳದೇ, ನಿಯಮ ಉಲ್ಲಂಘಿಸಿ ಕಾರ್ಯನಿರ್ವಹಿಸುತ್ತಿರುವುದು ಗಮನಕ್ಕೆ ಬಂದಿದೆ. ಜಿಲ್ಲೆಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಹೋಂಸ್ಟೇ ಮಾಲೀಕರು, ನಿರ್ವಾಹಕರು ನಿಯಮದ ಅನ್ವಯ ನೋಂದಣಿ ಮಾಡಿಕೊಳ್ಳಬೇಕು.**
> **- ಕೆ.ಎಸ್.ಲತಾಕುಮಾರಿ, ಜಿಲ್ಲಾಧಿಕಾರಿ**

ಅಗತ್ಯ ದಾಖಲಾತಿಗಳಾದ ಗ್ರಾಮ ಪಂಚಾಯಿತಿ ನಿರಾಕ್ಷೇಪಣಾ ಪತ್ರ, ಇ-ಖಾತಾ ಅಥವಾ ಪಹಣಿ, ಪೊಲೀಸ್ ನಿರಾಕ್ಷೇಪಣಾ ಪತ್ರ, ವಾಸಸ್ಥಳ ದೃಢೀಕರಣ ಪತ್ರ, ಆಧಾರ್ ಕಾರ್ಡ್, ಮಾಲೀಕರ ಭಾವಚಿತ್ರ ಮತ್ತು ಹೋಂಸ್ಟೇ ಯೋಜನೆಯ ಛಾಯಾಚಿತ್ರಗಳನ್ನು ನಗರದ ಯಾತ್ರಿ ನಿವಾಸದ ಆವಣದಲ್ಲಿರುವ ಪ್ರವಾಸೋದ್ಯಮ ಇಲಾಖೆಯ ಉಪ ನಿರ್ದೇಶಕರಿಗೆ ನೀಡಿ, ನೋಂದಣಿ ಮಾಡಿಕೊಳ್ಳುವುದು ಕಡ್ಡಾಯ ಗೊಳಿಸಿದೆ. ತಪ್ಪಿದ್ದಲ್ಲಿ ಕಠಿಣ ಕ್ರಮದ ಎಚ್ಚರಿಕೆ ನೀಡಲಾಗಿದೆ.

ನಿಗದಿತ ಅವಧಿಯೊಳಗೆ ನೋಂದಣಿ ಮಾಡಿಕೊಳ್ಳದೇ ಕಾರ್ಯ ನಿರ್ವಹಿಸುವ ಹೋಂಸ್ಟೇಗಳ ಸೌಲಭ್ಯಕ್ಕೆ ಸಂಬಂಧಿಸಿದಂತೆ ಪ್ರವಾಸೋದ್ಯಮ ವ್ಯಾಪಾರ (ಸೌಲಭ್ಯ ಮತ್ತು ನಿಯಂತ್ರಣ) ಕಾಯ್ದೆ ಅಧಿನಿಯಮ ಉಲ್ಲಂಘಿಸಿರುವುದು ಕಂಡು ಬಂದರೆ ಅಪರಾಧವಾಗಿ ಪರಿಗಣಿಸಿ, ತಪ್ಪಿತಸ್ಥರಿಗೆ ದಂಡ ವಿಧಿಸಲಾಗುವುದೆಂದು ತಿಳಿಸಲಾಗಿದೆ.

## ನಿರ್ಲಕ್ಷ್ಯದ ಚಾಲನೆ : ಮನೆಗೆ ನುಗ್ಗಿದ ಲಾರಿ



• ಪ್ರಜೋದಯ ವರದಿ

**ಅರಕಲಗೂಡು:** ಚಾಲಕನ ನಿರ್ಲಕ್ಷ್ಯದಿಂದ ಲಾರಿಯೊಂದು ಮನೆಗೆ ನುಗ್ಗಿ ಆರು ಜನರು ಸ್ವಲ್ಪದರಲ್ಲೇ ಪ್ರಾಣಾಪಾಯದಿಂದ ಪಾರಾಗಿರುವ ಘಟನೆ ಪಟ್ಟಣದ ಸಾಲಗೇರಿ ಬಡಾವಣೆಯಲ್ಲಿ ಭಾನುವಾರ ರಾತ್ರಿ ನಡೆದಿದೆ.

ಕೊಣನೂರು ಕಡೆಯಿಂದ ಚಿಕ್ಕಮಗಳೂರಿಗೆ ತೆರಳುತ್ತಿದ್ದ ಲಾರಿ ಚಾಲಕನ ಅಜಾಗರೂಕತೆಯಿಂದ ರಸ್ತೆ ಬದಿಯ ರಂಗನಾಥ್ ಎಂಬುವವರ ಮನೆಗೆ ನುಗ್ಗಿದೆ. ಕುಟುಂಬ ಸದಸ್ಯರು ತಕ್ಷಣವೇ ಹೊರಗೆ ಓಡಿ ಬಂದಿದ್ದರಿಂದ ಅನಾಹುತ ಸಂಭವಿಸಿಲ್ಲ. ವಾಹನದ ಮುಂಭಾಗ ಸಂಪೂರ್ಣ ಜಖಂಗೊಂಡು, ಚಾಲಕ ದೀಪಕ್ ಗಂಭೀರವಾಗಿ ಗಾಯಗೊಂಡಿದ್ದಾನೆ. ಅಗ್ನಿಶಾಮಕ ಠಾಣಾಧಿಕಾರಿ ಎ.ವಿ. ಪರಮೇಶ್ವರಗೌಡ ಮತ್ತು ಸಿಬ್ಬಂದಿ ನಿರಂತರ ಒಂದು ಗಂಟೆ ಕಾರ್ಯಾಚರಣೆ ನಡೆಸಿ ಚಾಲಕನನ್ನು ರಕ್ಷಿಸಿ ಆಸ್ಪತ್ರೆಗೆ ದಾಖಲಿಸಿದರು. ಚಾಲಕ ದೀಪಕ್ ಚಿಕ್ಕಮಗಳೂರು ಜಿಲ್ಲೆ ಅಂಬಳೆ ಹೋಬಳಿ ಸಿರಗಾಪುರ ಗ್ರಾಮದವನು ಎನ್ನಲಾಗಿದೆ. ಪಟ್ಟಣ ಠಾಣೆ ಪೊಲೀಸರು ಪರಿಶೀಲಿಸಿದರು.

CMYK CMYK CMYK CMYK

# ತನ್ನ ಹೆಸರನ್ನೇ ದ್ವೇಷಿಸಿದ್ದ ಫುಟ್ಬಾಲ್ ದಂತಕತೆ ಪೀಲೆ



ವಿದೇಶವಾಸಿ ಬ್ರೆಜಿಲ್‌ನ ಜೀವನಾಡಿ ಫುಟ್ಬಾಲ್. ಆ ಜೀವನಾಡಿಯ ಮತ್ತೊಂದು ಹೆಸರು ಪೀಲೆ. ಏಕೆಂದರೆ, ಬ್ರೆಜಿಲ್ ನಾಗರಿಕರಿಗೆ ಫುಟ್ಬಾಲ್, ಪೀಲೆ – ಎರಡೂ ಒಂದೇ. ಒಬ್ಬ ಕ್ರೀಡಾಳುವಾಗಿ ಇಡೀ ವಿಶ್ವವೇ ತನ್ನತ್ತ ತಿರುಗಿ ನೋಡುವಂತೆ ಮಾಡಿದ್ದಷ್ಟೇ ಅಲ್ಲ, ತನ್ನ ದೇಶಕ್ಕೂ ಒಂದು ಹೆಗ್ಗುರುತು ತಂದುಕೊಟ್ಟ ಪೀಲೆ. ಜಾಗತಿಕ ಫುಟ್ಬಾಲ್ ಕಣ್ಮಣಿಯ ಜೀವನವೇ ಇಂದಿನ ಯುವಕರಿಗೆ ಸ್ಫೂರ್ತಿಯ ಸೆಲೆ. ಆತ ಸದಾ ಹೇಳುತ್ತಿದ್ದ ಆ ಮೂರು ಮಾತು ಇಂದಿನ ಯುವಜನತೆಗೆ ದಾರಿದೀಪ.

ಎಲ್ಲರೂ 2023ರ ಹೊಸ ವರ್ಷವನ್ನು ಎದುರುಗೊಳ್ಳಲು ಕಾತರದಿಂದ ಕಾಯುತ್ತಿದ್ದ ಎರಡು ದಿನ ಮೊದಲು, ಅದ್ಯಾವ ಮೃತಘಳಿಗೆಯೋ ಏನೊ, ಭಾರತೀಯರಿಗಷ್ಟೇ ಅಲ್ಲ, ಇಡೀ ವಿಶ್ವವೇ ದುಃಖತಪ್ತವಾಗಿತ್ತು. ಅಂದು ಬೆಳ್ಳಂಬೆಳಿಗ್ಗೆ ಮೂರು ತಾಸಿನ ಅವಧಿಯ ಒಳಗೆ ಮೂರು ಅಶುಭ ವಾರ್ತೆಗೆ ಕಿವಿ ತೆರೆದುಕೊಳ್ಳಬೇಕಾದ ಅನಿವಾರ್ಯತೆ.

ಮೊದಲನೆಯದು ಭಾರತ ತಂಡದ ಉತ್ತಮ ಕ್ರಿಕೆಟ್ ಆಟಗಾರ ರಿಷಭ್ ಪಂತ್ ಕಾರು ಅಪಘಾತದಲ್ಲಿ ಘಾಸಿಗೊಂಡ ಸುದ್ದಿ. ಎರಡನೆಯದು ಪ್ರಧಾನಿ ಮೋದಿಯವರಿಗೆ ಮಾತೃ ವಿಯೋಗದ ವಿಷಯ. ಮೂರನೆಯದು ಫುಟ್ಬಾಲ್ ದಂತಕಥೆ, ಬ್ರೆಜಿಲ್ ಪೀಲೆಯ ಸಾವಿನ ಸಮಾಚಾರ. ಇದ್ದುದರಲ್ಲಿ, ರಿಷಭ್ ಪಂತ್ ಪ್ರಾಣಾಪಾಯದಿಂದ ಪಾರಾಗಿದ್ದು, ಗುಣಮುಖರಾಗುತ್ತಿದ್ದಾರೆ ಎಂಬುದೇ ಸಮಾಧಾನದ ಸಂಗತಿ.

ಉಳಿದ ಎರಡರಲ್ಲಿ, ಒಂದು ಸಾವು ಬಹುತೇಕ ಭಾರತೀಯರನ್ನು, ಇನ್ನೊಂದು ಸಾವು ವಿಶ್ವದಾದ್ಯಂತ ಬಹುತೇಕರನ್ನು ಶೋಕ ಭಾವದಲ್ಲಿ ನೂಕಿತ್ತು. ಪ್ರಧಾನಿ ಮೋದಿಯವರ ನೂರು ಸಂವತ್ಸರಗಳನ್ನು ಕಂಡ ತಾಯಿಯ ವಯೋಸಹಜ ಸಾವಿನ ನಂತರ ಅಂತ್ಯಕ್ರಿಯೆ ಮೂರು ತಾಸಿನ ಒಳಗೆ ಮುಗಿದು ಹೋಯಿತು.

ಶವವನ್ನು ಸಾಗಿಸುತ್ತಿದ್ದ ವಾಹನದಲ್ಲಿ ದೇಶದ ಪ್ರಧಾನಿಯೊಬ್ಬ ತಬ್ಬಲಿಯಂತೆ ಕುಳಿತ ಚಿತ್ರ ಎಲ್ಲರನ್ನೂ ಭಾವುಕರನ್ನಾಗಿಸಿತು. ಇಲ್ಲಿ ಶತಾಯುಷಿ ತಾಯಿಯ ಶವದ ಮುಂದೆ ಮಗ ಕುಳಿತಿದ್ದರೆ, ಅತ್ತ, ದೂರದ ಬ್ರೆಜಿಲ್‌ನಲ್ಲಿ ಅದೇ 2023ರ ಆದಿಯಲ್ಲಿ ಅಲ್ಲಿನ ಫುಟ್ಬಾಲ್ ಆರಾಧ್ಯ ದೈವ ಪೀಲೆಯ ಪಾರ್ಥಿವ ಶರೀರ ಆತನ ಶತಾಯುಷಿ ತಾಯಿಯ ಮುಂದೆ ಹಾದು ಹೋಯಿತು.

ಎಂಥಾ ವಿಪರ್ಯಾಸ ನೋಡಿ! ಬ್ರೆಜಿಲ್ ಜನರಿಗೆ ಪೀಲೆ ಎಂದರೆ ಕೇವಲ ಆಟಗಾರನಲ್ಲ, ಕೇವಲ ಒಬ್ಬ ವ್ಯಕ್ತಿಯಲ್ಲ. ಆ ದೇಶದ ಜನರಿಗೆ ರಾಜನಿಗೆ ಸಮಾನನಾಗಿದ್ದ. ಅಲ್ಲಿ ಪೀಲೆಯನ್ನು ಜನ ಓ ರೀ ಎಂದೇ ಸಂಬೋಧಿಸುತ್ತಿದ್ದರು. ಬ್ರೆಜಿಲ್‌ನ ರಾಷ್ಟ್ರೀಯ ಭಾಷೆ ಪೋರ್ಚುಗೀಸ್‌ನಲ್ಲಿ ಓ ರೀ ಎಂದರೆ, ಇಂಗ್ಲೀಷಿನಲ್ಲಿ ದಿ ಕಿಂಗ್ ಅಥವಾ ರಾಜ ಎಂದು ಅರ್ಥ.

ರಾಜ ಸತ್ತರೆ ಪ್ರಜೆಗಳು ತಬ್ಬಲಿಯಾಗುತ್ತಾರೆ ಎಂಬ ಮಾತಿದೆ. ಅದಕ್ಕೆ ತಾಯಿಯೂ ಹೊರತಲ್ಲ. ಅಂದ ಹಾಗೆ ಅಭಿಮಾನಿಗಳು ಪೀಲೆಯನ್ನು ಪೆರೋಲಾ ನೆಗ್ರಾ (ಕಪ್ಪು ಮುತ್ತು) ಎಂದೂ ಕರೆಯುತ್ತಿದ್ದರು. ಪೀಲೆಯನ್ನು ಜನ ರಾಜ ಎಂದರೆ ತಪ್ಪೇನಿಲ್ಲ ಬಿಡಿ. ಕೇವಲ ಯುದ್ಧ ಗೆದ್ದು, ರಾಜ್ಯ ಕಟ್ಟಿ, ಆಡಳಿತ ನಡೆಸಿದವ ಮಾತ್ರ ರಾಜನಾಗಬೇಕಿಲ್ಲ. ಆಧುನಿಕ ಯುಗದಲ್ಲಿ, ಕೇವಲ ಭೂಪಟಕ್ಕೆ ಮಾತ್ರ ಸೀಮಿತವಾಗಿದ್ದ ಒಂದು ದೇಶವನ್ನು ವಿಶ್ವವೇ ಗುರುತಿಸಿ, ಅದರೆಡೆಗೆ ತಿರುಗಿ ನೋಡುವಂತೆ ಮಾಡಿದವ ಯಾವ ರಾಜನಿಗೂ ಕಮ್ಮಿಯಲ್ಲ.

ಇಂದಿಗೂ ಬ್ರೆಜಿಲ್ ಎಂದಾಕ್ಷಣ ನೆನಪಾಗುವುದು ಫುಟ್ಬಾಲ್ ದೇಶ ಎಂದು. ವಿಶ್ವದ ದೊಡ್ಡಣ್ಣ ಅಮೆರಿಕದ ದಕ್ಷಿಣಕ್ಕಿರುವ ಬ್ರೆಜಿಲ್ ಮತ್ತು ಅರ್ಜೆಂಟಿನಾ ಇಂದಿಗೂ ಹೆಸರುವಾಸಿಯಾಗಿರುವುದು ಫುಟ್ಬಾಲ್ ಆಟಕ್ಕೆ ವಿನಃ ಶಿಕ್ಷಣ, ತಂತ್ರನ, ಆರ್ಥಿಕತೆ ಯಾವುದಕ್ಕೂ ಅಲ್ಲ. ಅಲ್ಲಿಯ ಜನರಿಗೆ ಊಟ, ಉಸಿರು, ಎಲ್ಲವೂ ಫುಟ್ಬಾಲ್.

ಇತ್ತೀಚೆಗೆ ವಿಶ್ವಕಪ್ ಗೆದ್ದ ಅರ್ಜೆಂಟಿನಾ ತಂಡ ದೇಶಕ್ಕೆ ಹಿಂತಿರುಗಿದಾಗ ಅವರನ್ನು ಸ್ವಾಗತಿಸಲು ರಾಜಧಾನಿಯಲ್ಲಿ ಐವತ್ತು ಲಕ್ಷ ಜನ ಸೇರಿದ್ದರು ಎಂದರೆ ಅದರ ತೀವ್ರತೆಯನ್ನು ಊಹಿಸಿಬಹುದು. ಐದು ಬಾರಿ ವಿಶ್ವಕಪ್ ಜಯಿಸಿದ ಬ್ರೆಜಿಲ್ ಕೂಡ ಅದಕ್ಕೆ ಹೊರತಲ್ಲ.


ಅರ್ಜೆಂಟೀನಾಕ್ಕೆ ಡಿಯಾಗೋ ಮಾರಿಡೋನಾ ಹೇಗೂ ಹಾಗೆಯೇ, ಅಥವಾ ಅದಕ್ಕಿಂತ ಮಿಗಿಲಾಗಿ ಬ್ರೆಜಿಲ್ಗೆ ಪೀಲೆ. ಪೀಲೆ ತನ್ನ ದೇಶಕ್ಕೆ ಹೆಸರು ತಂದುಕೊಡಲು ಶಸ್ತ್ರಾಸ್ತ್ರ ಹಿಡಿದು ಯುದ್ಧ ಮಾಡಿಲ್ಲ, ಶಾಸ್ತ್ರದಿಂದ ಎದುರಾಳಿ ತಂಡದೊಂದಿಗೆ ಸೆಣಸಿದ. ದೇಶ ದೇಶದ ನಡುವಿನ ರಾಜಕೀಯದ ಮೇಲಾಟ ಮಾಡಲಿಲ್ಲ, ಬದಲಾಗಿ ಆಟಗಾರರೊಂದಿಗೆ ಚೆಂಡಿಗಾಗಿ ಸ್ಪರ್ಧಿಸಿದ.

ಒಂದು ದೇಶದ ಮೇಲೆ ಬಾಂಬ್ ಹಾಕಿಲ್ಲ, ಆದರೆ ಎದುರಾಳಿ ದೇಶದ ಗೋಲು ಕಂಬದೊಳಗೆ ಬಾಲ್ ಹಾಕಿದ. ದೇಶಕ್ಕಾಗಿ ಆತನೂ ಬೆವರು ಸುರಿಸಿದ; ರಣರಂಗದಲ್ಲಿ ಅಲ್ಲ, ಕ್ರೀಡಾಂಗಣದಲ್ಲಿ. ಕೆಲವರು ಹೆಸರು ಗಳಿಸಬೇಕೆಂದು ಗೋಲ್ (ಗುರಿ) ಇಟ್ಟುಕೊಂಡು ಕೆಲಸ ಮಾಡಿದರೆ, ಪೀಲೆಗೆ ಗೋಲೇ ಹೆಸರುತಂದಿ ಕೊಟ್ಟಿತ್ತು.

ಪೀಲೆಗಷ್ಟೇ ಅಲ್ಲ, ಬ್ರೆಜಿಲ್ ದೇಶಕ್ಕೂ ಹೆಸರು ತಂದುಕೊಟ್ಟಿತ್ತು. ಅತ್ಯಂತ ಗಮನಾರ್ಹ ಮತ್ತು ಕುತೂಹಲಕಾರಿ ಸಂಗತಿಯೆಂದರೆ, ಆ ಕಾಲದಲ್ಲಿ ಆಂತರಿಕ ಯುದ್ಧದಿಂದ ಇಬ್ಭಾಗವಾಗಿದ್ದ ಬ್ರೆಜಿಲ್, ವಿಶ್ವಕಪ್ ಗೆಲುವಿನಿಂದ ಒಂದಾಯಿತು. ಜನರ ನಡುವಿನ ಮನಸ್ತಾಪ ಮರೆಸಿ, ಒಗ್ಗೂಡಿಸಿದವ ಯಾವ ರಾಜನಿಗೂ ಕಮ್ಮಿಯಲ್ಲ.

1958ರಲ್ಲಿ ಬ್ರೆಜಿಲ್ ಮೊದಲ ಬಾರಿ ಫುಟ್ಬಾಲ್ ವಿಶ್ವಕಪ್ ಗೆದ್ದಿತ್ತು. ವಿಶ್ವವೇ ಅದರೆಡೆಗೆ ನೋಡುವಂತಾಯಿತು. ಅಲ್ಲಿಯವರೆಗೆ ಬ್ರೆಜಿಲ್ ಪರಿಸ್ಥಿತಿ ಹೇಗಿತ್ತು ಎಂದರೆ, ವಿಶ್ವ ಚಾಪಿಯನ್‌ಶಿಪ್ ಬಾವುಟದ ಮೇಲೆ ಹೆಸರು ತಪ್ಪಾಗಿ ಮುದ್ರಿತವಾಗಿದ್ದರೂ ಯಾರೂ ಮಾತಾಡುತ್ತಿರಲಿಲ್ಲ.





ವಿಶ್ವಕಪ್‌ನಂತಹ ದೊಡ್ಡ ಪಂದ್ಯದಲ್ಲಿ ಭಾಗವಹಿಸಲು ಬಂದ ಬ್ರೆಜಿಲ್ ತಂಡವನ್ನು ಯಾರೂ ಗುರುತಿಸುತ್ತಿರಲಿಲ್ಲ. ಯಾವ ಊರಿಗೆ ಹೋಗಲಿ, ಯಾವ ಹೋಟೇಲಿನಲ್ಲಿ ಉಳಿದು ಕೊಳ್ಳಲಿ, ಎಲ್ಲರಿಗೂ ಬ್ರೆಜಿಲ್ ತಂಡದ ಆಟಗಾರರು ಅಪರಿಚಿತರು, ಯಾವುದೋ ಅಜ್ಞಾತ ಲೋಕದಿಂದ ಬಂದವರು. ಅದನ್ನು ಮೊದಲು ತೊಡೆದು ಹಾಕಿದ್ದು ಪೀಲೆ. ಆ ವರ್ಷದ ವಿಶ್ವಕಪ್‌ನಲ್ಲಿ ಪೀಲೆ ಆತಿಥೇಯ ಸ್ವೀನ್ ವಿರುದ್ಧ ಆಡಿದ.

ಆ ಟೂರ್ನಿಯ ಫೈನಲ್ ಪಂದ್ಯದಲ್ಲಿನ ಎರಡು ಗೋಲ್ ಸೇರಿಸಿ ಒಟ್ಟೂ ಆರು ಗೋಲ್ ಹೊಡೆದಿದ್ದ. ಆಗಿನ್ನೂ ಪೀಲೆ ಹದಿನೇಳು ವರ್ಷದ ಯುವಕನಾಗಿದ್ದ, ವಿಶ್ವಕಪ್ ಗೆದ್ದ ತಂಡದ ಅತಿ ಕಿರಿಯ ಆಟಗಾರ ಎಂಬ ಕೀರ್ತಿಗೂ ಪಾತ್ರನಾಗಿದ್ದ. ನಂತರ ಬ್ರೆಜಿಲ್ 1962 ಮತ್ತು 1970ರ ವಿಶ್ವಕಪ್ ಜಯಿಸಿದಾಗಲೂ ಪೀಲೆ ಅದರ ಭಾಗವಾಗಿದ್ದ, ಮೂರು ವಿಶ್ವಕಪ್ ಗೆದ್ದ ತಂಡದ ಭಾಗವಾದ ಮೊದಲ ಮತ್ತು ಏಕೈಕ ಆಟಗಾರನಾದ.

1966ರಲ್ಲಿ ಪೀಲೆ ತಂಡದಿಂದ ಹೊರಗೆ ಉಳಿಯಬೇಕಾಯಿತು, ಇಲ್ಲವಾದರೆ ಆ ವರ್ಷವೂ ಬ್ರೆಜಿಲ್ ಗೆಲ್ಲುತ್ತಿತ್ತೋ ಏನೋ! ಪೀಲೆ ಹುಟ್ಟಿದ್ದು ಸಾಮಾನ್ಯ ಬಡವರ ಕುಟುಂಬದಲ್ಲಿ. ತಂದೆಗೆ ಸಣ್ಣ ನೌಕರಿ ಇತ್ತಾದರೂ, ಬರುವ ಸಂಬಳ ಸಂಸಾರ ನಡೆಸಲು ಪೂರ್ತಿ ಸಾಕಾಗುತ್ತಿರಲಿಲ್ಲ.

ತನ್ನ ಕರ್ಚಿಗಾಗಿ ಪೀಲೆ ಚಹಾ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ. ಬಡತನ ಅವನನ್ನು ಫುಟ್ಬಾಲ್ ಗೀಳಿನಿಂದ ವಿಮುಖನನ್ನಾಗಿಸಲಿಲ್ಲ. ಬಟ್ಟೆ ಅಥವಾ ಕಾಗದವನ್ನು ಗೋಲಾಕಾರವಾಗಿ ಸುತ್ತಿ, ಬಳ್ಳಿ ಕಟ್ಟಿ ಚೆಂಡು ಮಾಡಿಕೊಂಡು ಆಡುತ್ತಿದ್ದ. ಅಪ್ಪನೇ ಅವನ ಫುಟ್ಬಾಲ್ ಗುರು.

ಅವನ ಆಟವನ್ನು ನೋಡಿದ ತಂದೆ ನಿನ್ನಲ್ಲಿ ದೈವದತ್ತವಾದ ಶಕ್ತಿಯಿದೆ, ನಿನ್ನ ಆರೋಗ್ಯ ಕಾಪಾಡಿಕೊಂಡು ಒಳ್ಳೆಯ ಆಟ ಆಡಿದರೆ ನಿನ್ನನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ ಎಂದು ಹೇಳಿದ್ದರಂತೆ. ಆಗ, ನಿನಗಾಗಿ ನಾನು ವಿಶ್ವಕಪ್ ಗೆದ್ದು ತರುತ್ತೇನೆ ಎಂದಿದ್ದನಂತೆ ಎಂಟು ವರ್ಷದ ಬಾಲಕ. ಅದಕ್ಕೆ ಸರಿಯಾಗಿ ಏಳು ವರ್ಷದ ನಂತರ ಸ್ಯಾಂಟೋಸ್ ಫುಟ್ಬಾಲ್ ಕ್ಲಬ್ ಪರವಾಗಿ ಆಡಲು ಮೊದಲ ಬಾರಿ ಸಹಿ ಹಾಕಿದ್ದ ಪೀಲೆ.

ಅಷ್ಟೇ ಅಲ್ಲ, ಆಡಿದ ಮೊದಲ ಲೀಗ್ ಪಂದ್ಯದ ನಾಲ್ಕು ಗೋಲ್ ಬಾರಿಸಿ ಗಮನ ಸೆಳೆದಿದ್ದ. ಪೀಲೆ ಹೆಸರಿನಲ್ಲಿ ಸಾಕಷ್ಟು ದಾಖಲೆಗಳಿವೆ. ಆತನ ಆತದ ಶೈಲಿ, ಇಪ್ಪತ್ತೈದು ಮೀಟರ್ ದೂರದಿಂದ, ಆಟಗಾರರ ನಡುವಿಂದ ಹೊಡೆದ ಪೆನಾಲ್ಟಿ ಕಿಕ್ ಎಲ್ಲವೂ ಇತಿಹಾಸದಲ್ಲಿ ದಾಖಲಾಗಿವೆ.

1969ರ ನವೆಂಬರ್ 19ರಂದು ಆತ ಹೊಡೆದ 1000ನೇ ಗೋಲು ಕೂಡ ಪೆನಾಲ್ಟಿ ಕಿಕ್ ಆಗಿತ್ತು. ಅದಕ್ಕೆ ಅವನ ಜತೆ ಆಡುತ್ತಿದ್ದ ಆಟಗಾರ ನೀನು ಸಾವಿರದ ಗೋಲ್ ಹೊಡೆಯಲಿ ಎಂದು ಆಟ ನಿಲ್ಲಿಸಿದ್ದೇವೆ ಎಂದು ತಮಾಷೆ ಮಾಡಿದ್ದನಂತೆ. ಆದರೆ, ನಂತರ ಪೀಲೆಯನ್ನು ಅಭಿನಂದಿಸಲು ಮೈದಾನಕ್ಕಿಳಿದ ಜನರನ್ನು ಹಿಂತಿರುಗಿಸಿ ಕಳಿಸಲು ಅರ್ಧ ಗಂಟೆ ಬೇಕಾಯಿತು ಎನ್ನುವುದೂ ಈಗ ಇತಿಹಾಸ.

ಅದರ ವಾರ್ಷಿಕೋತ್ಸವದ ಆಚರಣೆಗಾಗಿ ಇಂದಿಗೂ

» ರಾಜ ಸತ್ತರೆ ಪ್ರಜೆಗಳು ತಬ್ಬಲಿಯಾಗುತ್ತಾರೆ ಎಂಬ ಮಾತಿದೆ. ಅದಕ್ಕೆ ತಾಯಿಯೂ ಹೊರತಲ್ಲ. ಅಂದ ಹಾಗೆ ಅಭಿಮಾನಿಗಳು ಪೀಲೆಯನ್ನು ಪೆರೋಲಾ ನೆಗ್ರಾ (ಕಪ್ಪು ಮುತ್ತು) ಎಂದೂ ಕರೆಯುತ್ತಿದ್ದರು. ಪೀಲೆಯನ್ನು ಜನ ರಾಜ ಎಂದರೆ ತಪ್ಪೇನಿಲ್ಲ ಬಿಡಿ. ಕೇವಲ ಯುದ್ಧ ಗೆದ್ದು, ರಾಜ್ಯ ಕಟ್ಟಿ, ಆಡಳಿತ ನಡೆಸಿದವ ಮಾತ್ರ ರಾಜನಾಗಬೇಕಿಲ್ಲ. ಆಧುನಿಕ ಯುಗದಲ್ಲಿ, ಕೇವಲ ಭೂಪಟಕ್ಕೆ ಮಾತ್ರ ಸೀಮಿತವಾಗಿದ್ದ ಒಂದು ದೇಶವನ್ನು ವಿಶ್ವವೇ ಗುರುತಿಸಿ, ಅದರೆಡೆಗೆ ತಿರುಗಿ ನೋಡುವಂತೆ ಮಾಡಿದವ ಯಾವ ರಾಜನಿಗೂ ಕಮ್ಮಿಯಲ್ಲ.

ಬ್ರೆಜಿಲ್‌ನ ಸ್ಯಾಂಟೋಸ್‌ನಲ್ಲಿ ಜನ ಸೇರುತ್ತಾರೆ. ಆ ದಿನವನ್ನು ಪೀಲೆ ಡೇ (ಪೀಲೆಯ ದಿವಸ) ಎಂದು ಕರೆಯುತ್ತಾರೆ. ವಿಷಯ ಏನೆಂದರೆ, ಅಸಲಿಗೆ ಪೀಲೆ ಎನ್ನುವುದು ಆತನ ನಿಜ ನಾಮವಲ್ಲ. ಅದಕ್ಕೆ ಯಾವುದೇ ಅರ್ಥವೂ ಇಲ್ಲ. ಆತನಿಗೆ ಅಪ್ಪ ಇಟ್ಟ ಹೆಸರು ಎಡಿಸನ್. ಅಮೆರಿಕದ ಪ್ರಸಿದ್ಧ ಸಂಶೋಧಕ ಥೊಮಸ್ ಎಡಿಸನ್‌ರಿಂದ ಪ್ರೇರಿತರಾಗಿ ಇಟ್ಟ ಹೆಸರು ಅದು. ನಂತರ ಅವರೇ ಅದನ್ನು ಎಡ್ಸನ್ ಎಂದು ಬದಲಾಯಿಸಿದ್ದರು.

ಎಲ್ಲರೂ ಆತನನ್ನು ಪ್ರೀತಿಯಿಂದ ಡಿಕೊ ಎಂದು ಕರೆಯುತ್ತಿದ್ದರು. ತನ್ನ ಊರಿನ ವಾಸ್ಕೊ ಡ ಗಾಮಾ ತಂಡದಲ್ಲಿ ಬೇಲೆ ಎಂಬ ಹೆಸರಿನ ಗೋಲ್ ಕೀಪರ್ ಇದ್ದ. ಪೀಲೆಗೆ ಆತ ಬಹಳ ಇಷ್ಟವಾಗಿದ್ದ. ತನ್ನ ಸ್ನೇಹಿತರ ಮುಂದೆ ಆತನ ಹೆಸರನ್ನು ಪೀಲೆ ಎಂದು ತಪ್ಪಾಗಿ ಉಚ್ಚರಿಸಿದ್ದರಿಂದ ಸ್ನೇಹಿತರು ಎಡಿಸನ್‌ನನ್ನು ಪೀಲೆ ಎಂದು ಛೇಡಿಸುತ್ತಿದ್ದರು. ಈತ ಎಷ್ಟು ಹೇಳಿದರೂ ಅವರು ಕೇಳುತ್ತಿರಲಿಲ್ಲ. ಇದೇ ವಿಷಯದಲ್ಲಿ ಸ್ನೇಹಿತರೊಂದಿಗೆ ಜಗಳ ಮಾಡಿದ್ದಕ್ಕಾಗಿ ಆತನನ್ನು ಕಾಲೇಜಿನಿಂದ ಎರಡು ದಿನ ಅಮಾನತು ಮಾಡಲಾಗಿತ್ತು. ಕರೆಯಲು ಸುಲಭವಾಗಿದೆ ಎನ್ನುವ ಕಾರಣಕ್ಕೆ ಪೀಲೆ ಎಂಬ ಹೆಸರನ್ನೇ ಆತ ಒಪ್ಪಿಕೊಂಡ.

ಬ್ರೆಜಿಲ್ ಪರ ಎಪ್ಪತ್ತೇಳು ಗೋಲ್ ಹೊಡೆದ ಪೀಲೆ ಜಾಗತಿಕ ಮಟ್ಟದಲ್ಲಿ ಮೊದಲ ಕ್ರೀಡಾ ತಾರೆ. ಪ್ರಥಮ ದರ್ಜೆಯ ಪಂದ್ಯದಲ್ಲಿ ಒಟ್ಟೂ ಒಂದು ಸಾವಿರದ ಇನ್ನೂರ ಎಂಭತ್ತೂರು ಗೋಲುಗಳು. ಇಂಟರ್ ನ್ಯಾಷನಲ್ ಒಲಿಂಪಿಕ್ ಕಮಿಟಿ 1999ರಲ್ಲಿ ಪೀಲೆಯನ್ನು ಶತಮಾನದ ಕ್ರೀಡಾಪಟು ಎಂದು ಸಾರಿತು.

ಇಪ್ಪತ್ತನೆಯ ಶತಮಾನದ ನೂರು ಪ್ರಭಾವಿ ವ್ಯಕ್ತಿಯಲ್ಲಿ ಪೀಲೆ ಹೆಸರು ದಾಖಲಾಗಿದೆ. ಪೀಲೆ ಕೆಲವು ಚಲನಚಿತ್ರಗಳಲ್ಲಿ ನಟಿಸಿದ್ದಾನೆ. ಸಂಗೀತ ಸಂಯೋಜನೆ ಮಾಡಿದ್ದಾನೆ, ಹಾಡಿದ್ದಾನೆ, ಮೂರು ವರ್ಷ ಬ್ರೆಜಿಲ್‌ನ ಕ್ರೀಡಾ ಮಂತ್ರಿಯಾಗಿಯೂ ಕೆಲಸ ಮಾಡಿದ್ದಾನೆ ಎಂದರೆ ಆತನ ವ್ಯಕ್ತಿತ್ವದ ಪರಿಚಯವಾಗುತ್ತದೆ.


ಇದೆಲ್ಲಕ್ಕಿಂತ ಮಹತ್ವದ ಸಂಗತಿಯೆಂದರೆ, ಬ್ರೆಜಿಲ್ ಸರಕಾರ ದೇಶ ಬಿಟ್ಟು ಹೋಗುವುದನ್ನು ತಡೆಯಲು 1961ರಲ್ಲಿ ಪೀಲೆಯನ್ನು ಸರಕಾರದ ಆಸ್ತಿ ಎಂದು ಘೋಷಿಸಿತ್ತು. ಆತ ಸದಾ ಹೇಳುತ್ತಿದ್ದ ಮೂರು ಮುಖ್ಯ ಪಾಠ ಕರ್ಣಪಟಲದಲ್ಲಿ ಮೊಳಗುತ್ತಿರುತ್ತದೆ. ಜನರನ್ನು ಗೌರವಿಸಲು ಕಲಿಯಿರಿ ಎಂಬುದು ಅವನ ಮೊದಲ ಪಾಠ.

ಎರಡನೆಯದು, ಯಾವುದೇ ಸಂದರ್ಭ ಒದಗಿಬಂದರೂ ಅದನ್ನು ಎದುರಿಸಲು ಸದಾ ಸಿದ್ಧರಾಗಿರಿ, ಮತ್ತು ಮೂರನೆಯದು, ಯಾವತ್ತೂ ನಾನೇ ಶ್ರೇಷ್ಠ ಎಂದು ತಿಳಿದುಕೊಳ್ಳಬೇಡಿ. ಪೀಲೆಗೆ ಪೀಲೆಯೇ ಸಾಟಿ!

**– ಕಿರಣ್ ಉಪಾಧ್ಯಾಯ,** ಬಹ್ರೈನ್

# ವೈದ್ಯಕೀಯ ಜಗತ್ತಿನ ಮಹಾನ್ ದುರಂತ: ಈಥರ್ ವಾರ್!

ಹಿಂದಿರುಗಿ ನೋಡಿದಾಗ **ಹಲ್ಲು ನೋವು!: ಅನುಭವಿಸಿದವರಿಗೇ ಗೊತ್ತು ಹಲ್ಲು ನೋವು ಎಷ್ಟು ಉಗ್ರವಾಗಿರುತ್ತದೆಯೆಂದು!** ಇಂದು ದಂತ ವೈದ್ಯರ ಬಳಿ ಹೋಗುತ್ತೇವೆ. ದಂತ ಕುರ್ಚಿಯಲ್ಲಿ ಕುಳಿತುಕೊಳ್ಳುತ್ತೇವೆ. ವೈದ್ಯರು ಅರಿವಳಿಕೆಯ ಇಂಜೆಕ್ಷನ್ನನ್ನು ಕೊಡುತ್ತಾರೆ. ನೋವು ಪವಾಡ ಸದೃಶವಾಗಿ ಮಾಯವಾಗುತ್ತದೆ. ಹಲ್ಲನ್ನು ಯಾವುದೇ ನೋವಿಲ್ಲದೆ ಕೀಳಿಸಿಕೊಳ್ಳುತ್ತೇವೆ. ಆರಾಮವಾಗಿ ಮನೆಗೆ ಬಂದುಬಿಡುತ್ತೇವೆ. ಎಷ್ಟು ಸುಲಭ ಅಲ್ಲವೆ!



**ಹಲ್ಲುನೋವಿನ ಅನುಭವವು ನಮ್ಮ ಅನುಭವಕ್ಕೆ ಬರದಿರುವಂತೆ ಮಾಡಿದ್ದು ಅರಿವಳಿಕೆ!:** ಅರಿವಳಿಕೆಯನ್ನು ಕಂಡುಹಿಡಿಯುವವರೆಗೆ ಹಲ್ಲು ನೋವಿನಿಂದ ಹಿಡಿದು ಅಂಗಛೇದನವರೆಗಿನ ಶಸ್ತ್ರಚಿಕಿತ್ಸೆ ಎಂದರೆ ನರಕ ಸದೃಶವಾಗಿತ್ತು. ಶಸಚಿಕಿತ್ಸಾ ಕೊಠಡಿ ಅಥವಾ ಆಪರೇಷನ್ ಥಿಯೇಟರ್ ಎಂದರೆ ಕಸಾಯಿ ಖಾನೆಗಿಂತಲೂ ಕಡೆಯಾಗಿತ್ತು. ರೋಗಿಗಳನ್ನು ಆಪರೇಷನ್ ಟೇಬಲ್ಲಿಗೆ ಬಿಗಿಯುವ ಚರ್ಮದ ಪಟ್ಟಿಗಳು, ಚಾಕು, ಚೂರಿ, ಮಚ್ಚು, ಗರಗಸಗಳಂಥ ಭಯಾನಕ ಉಪಕರಣಗಳು. ಆಪರೇಷನ್ ಮಾಡುವಾಗ, ರೋಗಿಯು ಕದಲದಂತೆ ಹಿಡಿದುಕೊಳ್ಳುವ ಯಮದೂತರ ಹಾಗೆ ಕಾಣುತ್ತಿದ್ದ ದಾಂಡಿಗರು ಹೀಗೆ. ಆಪರೇಷನ್ ಮಾಡುವಾಗ ರೋಗಿಯ ಕಿರುಚಾಟವು ಮುಗಿಲನ್ನು ಮುಟ್ಟುತ್ತಿತ್ತು.

ರಾಬರ್ಟ್ ಲಿಸ್ಟನ್ (1794–1847) ಎಂಬ ಸ್ಕಾಟಿಶ್ ವೈದ್ಯನು 25–30 ಸೆಕಂಡುಗಳ ಒಳಗೆ ಕಾಲನ್ನು ತುಂಡರಿಸುತ್ತಿದ್ದನು. ತನಗೇನಾಗುತ್ತಿದೆ ಎನ್ನುವುದು ರೋಗಿಗೆ ತಿಳಿಯುವ ಮೊದಲೇ ಶಸ್ತ್ರ ಚಿಕಿತ್ಸೆಯು ಮುಗಿದು ಹೋಗುತ್ತಿತ್ತು. 1835–1840ರ ನಡುವೆ ಈತನು 66 ಅಂಗಛೇದನವನ್ನು ಮಾಡಿದ. ಅವರಲ್ಲಿ 10 ಜನರು ಮಾತ್ರ ಜೀವವನ್ನು ಬಿಟ್ಟರು. ಉಳಿದವರು ಬದುಕುಳಿದರು ಎಂದು ರಾಯಲ್ ಕಾಲೇಜ್ ಆಫ್ ಸರ್ಜನ್ಸ್ ದಾಖಲೆಯನ್ನು ನೀಡುತ್ತದೆ. ಆದರೆ ಎಲ್ಲ ಶಸ್ತ್ರವೈದ್ಯರು ಇಷ್ಟು ತ್ವರಿತವಾಗಿ ಶಸ್ತ್ರಚಿಕಿತ್ಸೆಯನ್ನು ನಡೆಸಲಾರದವರಾಗಿದ್ದರು. ಹಾಗಾಗಿ ರೋಗಿಗಳಿಗೆ ನರಕಯಾತನೆ ತಪ್ಪುತ್ತಿರಲಿಲ್ಲ.

**ಅಜ್ಞಾತ ಅನಿಲ:** ವೈದ್ಯವಿಜ್ಞಾನವು ಇಂಥ ದುರ್ಭರ ಸ್ಥಿತಿಯಲ್ಲಿದ್ದಾಗ, ಅದಕ್ಕೊಂದು ಮಹಾನ್ ತಿರುವನ್ನು ನೀಡಿ, ರೋಗಿಗಳ ಬದುಕನ್ನು ಸಹನೀಯವಾಗಿ ಮಾಡಿದ್ದು, ಆಸ್ಪತ್ರೆಯ ಸಂಶೋಧನಾ ಕೊಠಡಿಯೂ ಅಲ್ಲ, ಪ್ರಯೋಗಾಲಯವೂ ಅಲ್ಲ, ಹಬ್ಬದ ವಾತಾವರಣವಿದ್ದ ಒಂದು ಮನರಂಜನಾ ಪ್ರದರ್ಶನವೆಂದರೆ ಅದು ಆಶ್ಚರ್ಯವಾಗುತ್ತದೆ!

ಜೋಸೆಫ್ ಪ್ರೀಸ್ಟ್ಲೀ (1733–1804) ಎಂಬ ಇಂಗ್ಲಿಷ್ ರಸಾಯನ ಶಾಸ್ತ್ರಜ್ಞರು ಒಂದು ಹೊಸ ಅನಿಲವನ್ನು ಕಂಡುಹಿಡಿದಿದ್ದರು. ಆದರೆ ಅದರ ಬಗ್ಗೆ ಅವರು ಹೆಚ್ಚಿನ ಅಧ್ಯಯನವನ್ನು ಮಾಡಲಿಲ್ಲ. ಹಂಫ್ರಿ ಡೇವಿ (1778–1829) ಎಂಬ ಪ್ರತಿಭಾವಂತ ಯುವ ರಸಾಯನ ಶಾಸ್ತ್ರಜ್ಞನು 1977–1800ರ ಮಧ್ಯದಲ್ಲಿ ಜೋಸೆಫ್ ಪ್ರೀಸ್ಟ್ಲೀ ಕಂಡುಹಿಡಿದಿದ್ದ ಅನಿಲವನ್ನು ತಾನೇ ಸೇವಿಸಿದ. ಅದು ಅವನಿಗೆ ವರ್ಣಿಸಲಾಗದ ಆನಂದವನ್ನು ತಂದಿತು.

ಯಾವುದೇ ಪ್ರಯತ್ನವಿಲ್ಲದೆ ಅವನಿಂದ ನಗುವಿನ ಹೊಳೆ ಹರಿಯಲಾರಂಭಿಸಿತು. ಶಾರೀರಿಕ ನೋವೆಲ್ಲ ಮಾಯವಾಯಿತು. ಕೊನೆಗೆ ಬ್ರಿಸ್ಟಲ್ ನಗರದ ನ್ಯುಮಾಟಿಕ್ ಇನ್‌ಸ್ಟಿಟ್ಯೂಷನ್ ಎಂಬಲ್ಲಿ ತನ್ನ ಗೆಳೆಯರನ್ನೆಲ್ಲ ಸೇರಿಸಿಕೊಂಡು ಎಲ್ಲರಿಗೂ ಹೊಸ ಅನಿಲವನ್ನು ಸೇವಿಸಲು ಹೇಳಿದ. ಎಲ್ಲರೂ ಹುಚ್ಚೆದ್ದು ಕುಣಿಯಲಾರಂಬಿಸಿದರು. ಅವರಿಗೆ ವಿನಾಕಾರಣ ಸಂತೋಷವಾಗಿ, ಮುಕ್ತಮನಸ್ಸಿನಿಂದ ನಗಲಾರಂಭಿಸಿದರು.

ಕುಣಿಯುವಾಗ ಕೆಳಕ್ಕೆ ಬಿದ್ದರೂ, ಅದನ್ನು ಲೆಕ್ಕಿಸದೆ ಎದ್ದು ಓಡಲಾರಂಭಿಸಿದರು. ಇದನ್ನು ನೋಡಿದ ಹಂಫ್ರಿ ಡೇವಿ ಈ ಅನಿಲವನ್ನು ಶಸಚಿಕಿತ್ಸೆಗಳಲ್ಲಿ ಬಳಸಿ ರೋಗಿಗಳ ನೋವನ್ನು ಕಡಿಮೆ ಮಾಡಬಹುದಲ್ಲ ಎಂದು ಅಂದುಕೊಂಡ. ಪ್ರೀಸ್ಟ್ಲೆ ಕಂಡು ಹಿಡಿದ ಈ ಹೊಸ ಅನಿಲವು ವಿಪರೀತ ನಗುವನ್ನು ತರಿಸುತ್ತಿದ್ದ ಕಾರಣ, ಇದನ್ನು ಲಾಫಿಂಗ್ ಗ್ಯಾಸ್– ನಗೆಯ ಅನಿಲ ಎಂದು ಹೆಸರನ್ನು ನೀಡಿದ. ಈತನೇ ಈ ಅಜ್ಞಾತ ಅನಿಲಕ್ಕೆ ನೈಟ್ರಸ್ ಆಕ್ಸೈಡ್ ಎಂಬ ವೈಜ್ಞಾನಿಕ ನಾಮಧೇಯವನ್ನೂ ನೀಡಿದ. ನಗೆಯ ಅನಿಲವು ಯುರೋಪಿನಲ್ಲಿ ಜನಪ್ರಿಯವಾಯಿತು. ನಗೆಯ ಪಾರ್ಟಿಗಳನ್ನು ಆಯೋಜಿಸಲಾರಂಭಿಸಿದರು. ಸಾರ್ವಜನಿಕ ಪ್ರದರ್ಶನಗಳು ಏರ್ಪಟ್ಟವು. ಆ ಪ್ರದರ್ಶನಗಳಲ್ಲಿ ಜನರನ್ನು ವೇದಿಕೆಗೆ ಕರೆಯಿಸಿ, ಅವರಿಗೆ ನೈಟ್ರಸ್ ಆಕ್ಸೈಡ್ ಅನಿಲವನ್ನು ಉಸಿರಾಡಲು ನೀಡುತ್ತಿದ್ದರು. ಅವರು ತಲೆತಿರುಗಿ ನಗುವುದು, ಕುಣಿಯುವುದು, ವಿಚಿತ್ರವಾಗಿ ವರ್ತಿಸುವುದು ಇವೆಲ್ಲವೂ ಜನರಿಗೆ ಒಂದು ದೊಡ್ಡ ಮನರಂಜನೆಯಾಯಿತು.

ಇಂದಿನ ಪರಿಭಾಷೆಯಲ್ಲಿ ಹೇಳುವುದಾದರೆ, ಇದೊಂದು ವಿಜ್ಞಾನ ಪ್ರದರ್ಶನ ಮತ್ತು ಪಾರ್ಟಿ ಟ್ರಿಕ್ ಎರಡರ ಮಧ್ಯದಲ್ಲಿದ್ದ ಒಂದು ಆಕರ್ಷಕ ಆಟವಾಗಿ ಪರಿಣಮಿಸಿತು. ವೇದಿಕೆಯ ಮೇಲಿನ ಜನರು ಅಟ್ಟಹಾಸದ ನಗುವಿನೊಡನೆ, ಊಹಿಸಲಿಕ್ಕೂ ಸಾಧ್ಯವಾಗದ ಹಾಗೆ ಆಡುತ್ತಿದ್ದ ಮಂಗಾಟಗಳನ್ನು ನೋಡಿ ಸಭೆಯಲ್ಲಿ ಕೂತಿದ್ದವರು ಹೊಟ್ಟೆ ಹಿಡಿದು ನಗುತ್ತಿದ್ದರು. ಆದರೆ ಆ ನಗುವಿನ ಮಂದಿರದಲ್ಲೇ ವೈದ್ಯಕೀಯ ಇತಿಹಾಸದ ಮಹತ್ವದ ಬಾಗಿಲೊಂದು ತೆರೆದುಕೊಳ್ಳಲಿದೆ ಎಂಬುದನ್ನು ಯಾರೂ ಊಹಿಸಲಿಲ್ಲ.

1844, ಡಿಸೆಂಬರ್ 10. ಅಮೆರಿಕದ ಹಾಟ್‌ಫೋರ್ಡ್ ನಗರ. ಅಲ್ಲಿ ಹೋರೇಸ್ ವೆಲ್ಸ್ (1815–1848) ಎಂಬ ದಂತವೈದ್ಯನೊಬ್ಬನಿದ್ದ. ಕುತೂಹಲಭರಿತ ಮನಸ್ಸು, ಗಮನಿಸುವ ಕಣ್ಣು, ವೈದ್ಯಕೀಯ ನೋವನ್ನು ಕಡಿಮೆ ಮಾಡಬೇಕೆಂಬ ಒಳಬಯಕೆ– ಇವು ಅವನೊಳಗಿದ್ದವು. ಒಂದು ದಿನ ಅವನು ಗಾರ್ಡ್ನರ್ ಕ್ವಿನ್ಸಿ ಕೊಲ್ಟನ್ ಎಂಬ ವ್ಯಕ್ತಿಯು ನಡೆಸುತ್ತಿದ್ದ ನೈಟ್ರಸ್ ಆಕ್ಸೈಡ್ ಸಾರ್ವಜನಿಕ ಪ್ರದರ್ಶನವನ್ನು ನೋಡಲು ಹೋದ. ಸಭಾಂಗಣದಲ್ಲಿ ಗ್ಯಾಸ್ ಉಸಿರಾಡಿದ ಜನರು ನಗುತ್ತಾ, ಕುಣಿಯುತ್ತ, ಲಾಗ ಹಾಕುತ್ತಾ, ಹಾಸ್ಯಾಸ್ಪದವಾಗಿ ವರ್ತಿಸುತ್ತಿದ್ದರು. ಆ ಸಂದರ್ಭದಲ್ಲಿ ಸ್ಯಾಮು ಯೆಲ್ ಕೂಲಿ ಎಂಬ ಯುವಕ, ಅನಿಲದ ಪ್ರಭಾವಕ್ಕೆ ಸಿಲುಕಿ, ಹಾರಿ ಕುಣಿದು ಕುಪ್ಪಳಿಸುವಾಗ, ತನ್ನ ಕಾಲಿಗೆ ಗಂಭೀರವಾಗಿ ಗಾಯವನ್ನು ಮಾಡಿಕೊಂಡ.

ವಿಚಿತ್ರವೆಂದರೆ ತನಗೆ ಅಷ್ಟು ದೊಡ್ಡ ಗಾಯವಾಗಿದೆ ಎಂಬುದರ ಪರಿವೆಯೇ ಅವನಿಗೆ

ಯಾವುದೇ ಪ್ರಯತ್ನವಿಲ್ಲದೆ ಅವನಿಂದ ನಗುವಿನ ಹೊಳೆ ಹರಿಯಲಾರಂಭಿಸಿತು. ಶಾರೀರಿಕ ನೋವೆಲ್ಲ ಮಾಯವಾಯಿತು. ಕೊನೆಗೆ ಬ್ರಿಸ್ಟಲ್ ನಗರದ ನ್ಯುಮಾಟಿಕ್ ಇನ್‌ಸ್ಟಿಟ್ಯೂಷನ್ ಎಂಬಲ್ಲಿ ತನ್ನ ಗೆಳೆಯರನ್ನೆಲ್ಲ ಸೇರಿಸಿಕೊಂಡು ಎಲ್ಲರಿಗೂ ಹೊಸ ಅನಿಲವನ್ನು ಸೇವಿಸಲು ಹೇಳಿದ. ಎಲ್ಲರೂ ಹುಚ್ಚೆದ್ದು ಕುಣಿಯಲಾರಂಬಿಸಿದರು. ಅವರಿಗೆ ವಿನಾಕಾರಣ ಸಂತೋಷವಾಗಿ, ಮುಕ್ತಮನಸ್ಸಿನಿಂದ ನಗಲಾರಂಭಿಸಿದರು.


ಇರಲಿಲ್ಲ. ಆ ಕ್ಷಣದಲ್ಲಿ ಅವನಿಗೆ ಕಿಂಚಿತ್ತೂ ನೋವಿನ ಅನುಭವವೇ ಆಗಲಿಲ್ಲ. ಪ್ರದರ್ಶನವೆಲ್ಲ ಮುಗಿದ ನಂತರ, ಅವನು ತನಗಾದ ಗಾಯವನ್ನು ನೋಡಿಕೊಂಡ. ಗಾಯದ ನೋವಿನ ಅನುಭವವಾಯಿತು. ಕಾಲನ್ನು ಹಿಡಿದುಕೊಂಡು ರೋದಿಸಲಾರಂಭಿಸಿದ. ಇತರರು ಇದು ಕೂಡ ಲಾಫಿಂಗ್ ಗ್ಯಾಸಿನ ಮನರಂಜನೆಯ ಒಂದು ಭಾಗ ಎಂದುಕೊಂಡು ನೋಡುತ್ತಿದ್ದರು.

ಆದರೆ ಹೋರೇಸ್ ವೆಲ್ಸ್ ಅವರ ಮನಸ್ಸಿನಲ್ಲಿ ಭಿನ್ನ ವಿಚಾರವೊಂದು ಮಿಂಚಿನಂತೆ ಹೊಳೆಯಿತು. ಕೂಲಿಗೆ ಗಂಭೀರವಾದ ಗಾಯವಾದರೂ, ಅವನಿಗೆ ನೋವಿನ ಅನುಭವವು ಸ್ವಲ್ಪವೂ ಆಗಲಿಲ್ಲ. ಹಾಗಿದ್ದ ಮೇಲೆ, ಈ ಅನಿಲವನ್ನು ಬಳಸಿದರೆ, ಹಲ್ಲನ್ನು ತೆಗೆಯುವಾಗ ನೋವೇ ಆಗಲಾರದಲ್ಲ ಎಂದು ತರ್ಕಿಸಿದ!

ಇದನ್ನು ಯುರೇಕಾ ಕ್ಷಣ ಎಂದು ಕರೆಯುತ್ತಾರೆ. ಅರ್ಕಿಮಿಡೀಸ್ ಸ್ನಾನದ ತೊಟ್ಟಿಯಲ್ಲಿ ನಿಯಮವೊಂದನ್ನು ಕಂಡಂತೆ, ಮರದಿಂದ ಬಿದ್ದ ಸೇಬಿನಲ್ಲಿ ನ್ಯೂಟನ್ ಗುರುತ್ವಾಕರ್ಷಣ ಶಕ್ತಿಯನ್ನು ಕಂಡಂತೆ, ವೈದ್ಯಕೀಯ ಲೋಕದಲ್ಲಿ ಕ್ರಾಂತಿಯನ್ನು ಉಂಟುಮಾಡಬಲ್ಲ ವಿಚಾರವೊಂದನ್ನು ಜನರ ನಗುವಿನೊಳಗೆ ವೆಲ್ಸ್ ಕಂಡುಕೊಂಡರು.

ಮರುದಿನವೇ (ಡಿಸೆಂಬರ್, 11) ತಮ್ಮ ವಿಚಾರವನ್ನು ಒರೆಗೆ ಹಚ್ಚಲು ಅವರು ನಿರ್ಧರಿಸಿದರು. ಇತರರ ಮೇಲೆ ಪ್ರಯೋಗ ಮಾಡುವ ಬದಲು, ತಮ್ಮ ಮೇಲೇ ಪ್ರಯೋಗ ಮಾಡಿಕೊಳ್ಳುವ ದಿಟ್ಟ ನಿರ್ಧಾರವನ್ನು ಕೈಗೊಂಡರು. ವೆಲ್ಸ್ ತಮ್ಮ ಸಹುದ್ಯೋಗಿ ದಂತವೈದ್ಯರನ್ನು ಕರೆಯಿಸಿದರು. ಅವರ ಮುಂದೆಯೇ ನೈಟ್ರಸ್ ಆಕ್ಸೈಡನ್ನು ಸೇವಿಸಿದರು. ತಮ್ಮ ಹುಳುಕು ಹಲ್ಲೊಂದನ್ನು ತೆಗೆಯುವಂತೆ ಕೇಳಿಕೊಂಡರು. ಆ ದಂತವೈದ್ಯರು ಹಲ್ಲನ್ನು ತೆಗೆದರು. ವೆಲ್ಸ್ ಆರಾಮವಾಗಿ ದಂತಕುಚಿಯಲ್ಲಿ ಕುಳಿತಿದ್ದರು. ಹಲ್ಲನ್ನು ತೆಗೆದಾದ ಮೇಲೆ ಏನು ಮಾರಾಯ!

ಸ್ವಲ್ಪವೂ ನೋವಾಗದಂತೆ ಹಲ್ಲನ್ನು ತೆಗೆದು ಬಿಟ್ಟೆಯಲ್ಲ! ಎಂದು ನಗೆಯಾಡಿದರು. ಜತೆಗೆ ನೋವಿಲ್ಲದೆ ಹಲ್ಲನ್ನು ತೆಗೆಯುವ ನವಮನ್ವಂತರವು ಆರಂಭವಾಗಲಿದೆ ಎಂದು ಉಲ್ಲಾಸದಿಂದ ಸಹೋದ್ಯೋಗಿಯ ಬಳಿ ಭವಿಷ್ಯ ನುಡಿದರು. ಇದೊಂದು ವೈಯಕ್ತಿಕ ಅನುಭವ ಮಾತ್ರವಾ ಗಿರದೆ, ಮಾನವ ಕುಲದ ನೋವಿನ ಇತಿಹಾಸದಲ್ಲಿ ಬರೆದ ಹೊಸ ಅಧ್ಯಾಯದ ಮುನ್ನುಡಿಯಾಗಿತ್ತು. ವೆಲ್ಸ್ ತಮ್ಮ ದಂತವೈದ್ಯಕೀಯ ವೃತ್ತಿಯಲ್ಲಿ ನೈಟ್ರಸ್ ಆಕ್ಸೈಡ್ ಬಳಸಿ ಹಲ್ಲು ತೆಗೆಯಲು ಆರಂಭಿಸಿದರು.



ಅವರ ಬಳಿಗೆ ಬರುವ ರೋಗಿಗಳಿಗೆ ನೋವಿನ ಅನುಭವವಾಗುತ್ತಿರಲಿಲ್ಲ ಅಥವಾ ಅತ್ಯಂತ ಕಡಿಮೆ ಪ್ರಮಾಣದ ನೋವಾಗುತ್ತಿತ್ತು. ಇದು ಎಷ್ಟು ದೊಡ್ಡ ಬದಲಾವಣೆಯನ್ನು ತಂದಿತು ಎಂದರೆ, ಹಲ್ಲನ್ನು ತೆಗೆಸಿಕೊಳ್ಳುವುದು ಒಂದು ಶಿಕ್ಷೆಯಲ್ಲ; ಅದೊಂದು ಮಧುರಾತಿಮಧುರ ಭಾವ (ಲಾಫಿಂಗ್ ಗ್ಯಾಸ್ ಆನಂದವನ್ನೂ ಕೊಡುತ್ತಿತ್ತಲ್ಲವೆ!) ಎಂದು ಜನರು ಭಾವಿಸುತ್ತಿದ್ದರು. ಹೀಗೆ ಮನುಕುಲಕ್ಕೆ ಮೊತ್ತ ಮೊದಲ ಅರಿವಳಿಕೆಯು ದೊರೆಯಿತು.

ವೆಲ್ಸ್, ನೈಟ್ರಸ್ ಆಕ್ಸೈಡ್ ಅರಿವಳಿಕೆಯನ್ನು ಯಶಸ್ವಿಯಾಗಿ ಪ್ರಯೋಗಿಸಿದ್ದರು. ಆಗ ಅವರಿಗೆ ತಮ್ಮ ಸಂಶೋಧನೆಯು ಜಗತ್ತಿಗೆಲ್ಲ ತಿಳಿಯಬೇಕು, ತಮ್ಮ ಹೆಸರು ಪ್ರಖ್ಯಾತವಾಗಬೇಕು, ತಮಗೆ ಕೈ ತುಂಬಾ ಹಣಬರಬೇಕು ಎಂದು ಮಾನವ ಸಹಜ ಆಸೆಯಿತ್ತು. ಹಾಗಾಗಿ ಅಂದಿನ ದಿನಗಳಲ್ಲಿ ವೈದ್ಯ ವಿಜ್ಞಾನದ ಕಾಶಿ ಎನಿಸಿದ ಹಾರ್ವರ್ಡ್ ಮೆಡಿಕಲ್ ಸ್ಕೂಲ್‌ಗೆ ಬಂದರು. ಅಲ್ಲಿ ಎಲ್ಲ ವೈದ್ಯರು, ವೈದ್ಯಕೀಯ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರ ಮುಂದೆ ನಗೆಯ ಅನಿಲವು ನೋವಿಲ್ಲದೆ ಹಲ್ಲನ್ನು ಕೀಳಲು ಹೇಗೆ ನೆರವಾಗುತ್ತದೆ ಎನ್ನುವುದನ್ನು ನಿದರ್ಶಿಸುವ ಅದಮ್ಯ ಉತ್ಸಾಹವನ್ನು ತೋರಿದರು.

ಹಾಗಾಗಿ ವೆಲ್ಸ್ 1845ರ ಜನವರಿ ತಿಂಗಳಿನಲ್ಲಿ ತಮ್ಮ ಮಾಜಿ ಶಿಷ್ಯ ಹಾಗೂ ಮಾಜಿ ಪಾಲುದಾರನಾಗಿದ್ದ ಟಿ.ಜಿ.ಮಾರ್ಟನ್ ಎನ್ನುವವನ ಜತೆಯಲ್ಲಿ ಬಾಸ್ಟನ್ನಿಗೆ ತೆರಳಿದರು. ವೇದಿಕೆ ಸಿದ್ಧವಾಯಿತು. ಜಾನ್ ಕಾಲಿನ್ಸ್ ವಾರನ್ ಎಂಬ ಶಸ್ತ್ರವೈದ್ಯರು, ವಿದ್ಯಾರ್ಥಿಯೊಬ್ಬನ ಹುಳುಕುಹಲ್ಲನ್ನು ತೆಗೆಯಲು ಸಿದ್ಧವಾದರು.

ವೆಲ್ಸ್, ನೈಟ್ರಸ್ ಆಕ್ಸೈಡ್ ಅನಿಲವಿದ್ದ ಚೀಲವನ್ನು ವೈದ್ಯ ವಿದ್ಯಾರ್ಥಿಯ ಮುಖಕ್ಕೆ ಹಿಡಿದರು. ಶಸ್ತ್ರವೈದ್ಯರು ಹುಡುಗನ ಹಲ್ಲನ್ನು ಹಿಡಿದೆಳೆಯುತ್ತಿದ್ದಂತೆಯೇ ಆ ಹುಡುಗನು ನೋವೂ... ಎಂದು ಕೂಗಿಕೊಂಡ. ಬಹುಶಃ ವೆಲ್ಸ್, ಬಹಳ ಬೇಗ ಅವನ ಮುಖದಿಂದ ಅನಿಲದ ಚೀಲವನ್ನು ಹೊರತೆಗೆದಿದ್ದರೆಂದು ಕಾಣುತ್ತದೆ.

ಹುಡುಗರೆಲ್ಲ ಒಮ್ಮೆಲೆ ದೊಂಬಿಯೆದ್ದು ಮೋಸ, ಅನ್ಯಾಯ... ಹಿಡಿಯಿರಿ ಆ ವಂಚಕನನ್ನ ಎಂದು ಕೂಗಲಾರಂಭಿಸಿದರು. ವೆಲ್ಸ್, ಸಭಾಂಗಣವನ್ನು ಬಿಟ್ಟು ಪರಾರಿಯಾದರು. ಅವರು ತಮ್ಮ ಸೋಲಿನಿಂದ ಧೃತಿಗೆಟ್ಟರು. ಆಳವಾದ ಖಿನ್ನತೆಗೆ ಬಲಿಯಾದರು. ಕೊನೆಗೆ ದಂತ ವೈದ್ಯಕೀಯ ವೃತ್ತಿಯನ್ನೇ ಬಿಟ್ಟುಬಿಟ್ಟರು!

**ವಿಲಿಯಂ ಮಾರ್ಟನ್:** ವೆಲ್ ಅವರ ಶಿಷ್ಯನಾಗಿದ್ದ ಮಾರ್ಟನ್‌ಗೆ ನೋವುರಹಿತ ದಂತ ಉತ್ಪಾಟನ ಎಂಬ ಪರಿಕಲ್ಪನೆಯು ತುಂಬಾ ಹಿಡಿಸಿತ್ತು. ಹಾಗಾಗಿ ವೆಲ್ ಬಳಸಿದ ನೈಟ್ರಸ್ ಆಕ್ಸೈಡಿಗಿಂತ ಪ್ರಬಲವಾದ ರಾಸಾಯನಿಕವನ್ನು ಏಕೆ ಬಳಸಬಾರದು ಎಂದು ಯೋಚಿಸಿದರು. ಕೂಡಲೇ ತಮ್ಮ ಗುರುಗಳಾಗಿದ್ದ ಚಾಲ್ಸ್ ಜಾಕ್ಸನ್ ಅವರ ಬಳಿ ತಮ್ಮ ಮನಸ್ಸಿನೊಳಗಿದ್ದ ವಿಷಯವನ್ನು ಪ್ರಸ್ತಾಪಿಸಿದರು. ಆಗ ಅವರು ಸಲ್ಫ್ಯೂರಿಕ್ ಈಥರ್ ಬಳಸುವಂತೆ ಸೂಚಿಸಿದರು. ಹಾಗೆಯೇ ಮಾರ್ಟನ್ ಬಳಸಲಾರಂಭಿಸಿದರು. ಇದು ನೈಟ್ರಸ್ ಆಕ್ಸೈಡಿಗಿಂತಲೂ ಪರಿಣಾಮಕಾರಿಯಾಗಿ ನೋವನ್ನು ಕಡಿಮೆ ಮಾಡುತ್ತಿತ್ತು.

ಮಾರ್ಟನ್, ಒಬ್ಬ ವೈದ್ಯನಿಗಿಂತ ಹೆಚ್ಚು ವ್ಯಾಪಾರಿಯ ಮನೋಭಾವದವರಾಗಿದ್ದರು. ಹಾಗಾಗಿ ತಾವು ಲೆಥಿಯಾನ್ ಎಂಬ ಹೊಸ ರಾಸಾಯನಿಕವನ್ನು ಕಂಡುಹಿಡಿದಿರುವುದಾಗಿಯೂ, ಅದರ ಏಕಸ್ವಾಮ್ಯ (ಪೇಟೆಂಟ್) ತಮಗೇ ಸಿಗಬೇಕೆಂದೂ ವಾದಿಸಿದರು. ಆದರೆ ವೈದ್ಯ ಸಮುದಾಯವು ಮಾರ್ಟನ್‌ರ ಮಾತನ್ನು ನಂಬಲಿಲ್ಲ. ಸಾಮ, ದಾನ, ಭೇದ, ದಂಡ ಎಂಬ ಉಪಾಯಗಳ ನಂತರ, ಮಾರ್ಟನ್ ಸಲ್ಫ್ಯೂರಿಕ್ ಈಥರ್ ಅನ್ನು ಮಾತ್ರ ಬಳಸುತ್ತಿದ್ದಾರೆ ಎಂದು ತಿಳಿಯಿತು. ಇದು ವಿಜ್ಞಾನ ಲೋಕಕ್ಕೆ ನೂರಾರು ವರ್ಷಗಳಿಂದ ಪರಿಚಿತವಾದ ರಾಸಾಯನಿಕವಾಗಿದ್ದ ಕಾರಣ ಇದಕ್ಕೆ ಏಕಸ್ವಾಮ್ಯ ದೊರೆಯಲಿಲ್ಲ.

**ಚಾರ್ಲ್ಸ್ ಜಾಕ್ಸನ್:** ಚಾರ್ಲ್ಸ್ ಜಾಕ್ಸನ್ ಅತ್ಯಂತ ಪ್ರತಿಭಾವಂತ ವೈದ್ಯ ಹಾಗೂ ವಿಜ್ಞಾನಿಯಾಗಿದ್ದರು. ಆದರೆ ಇವರು ಮಹಾನ್ ವ್ಯಾಜ್ಯಾಸಕ್ತರೂ, ಖಟ್ಲೆಪ್ರಿಯರೂ ಆಗಿದ್ದರು. ಹಾಗಾಗಿ ಇವರು ಸಲ್ಫ್ಯೂರಸ್ ಈಥರ್ ಉತ್ತಮ ಅರಿವಳಿಕೆ ಎಂಬ ವಿಚಾರವನ್ನು ತಾವು ಮಾರ್ಟನ್‌ಗೆ ಹೇಳಿದ ಕಾರಣ, ಅದರ ಕೀರ್ತಿ ಮತ್ತು ಹಣ ತಮಗೇ ಸಲ್ಲಬೇಕೆಂದು ವಾದಿಸಿದರು. ಮಾರ್ಟನ್, ಒಬ್ಬ ಟೆಕ್ನಿಷಿಯನ್ ಮಾತ್ರ; ಅವನಿಗೆ ಸಂಶೋಧನೆಯ ಲವಲೇಶ ತಿಳಿವೂ ಇಲ್ಲವೆಂದು ಸಾರ್ವಜನಿಕವಾಗಿ ವಾದಿಸಲಾರಂಭಿಸಿದರು.

**ಈಥರ್ ವಾರ್:** ಅರಿವಳಿಕೆಯನ್ನು ನಿಜವಾಗಿ ಯಾರು ಕಂಡುಹಿಡಿದರು ಎನ್ನುವ ಬಗ್ಗೆ ಹೋರೆಸ್ ವೆಲ್ಸ್, ಟಿಜಿ ಮಾರ್ಟನ್ ಮತ್ತು ಚಾರ್ಲ್ಸ್ ಜಾಕ್ಸನ್ ಅವರ ನಡುವೆ ಒಂದು ದೊಡ್ಡ ಯುದ್ಧವೇ ನಡೆಯಿತು. ಇದು ವೈದ್ಯಕೀಯ ರಂಗದಲ್ಲಿ ಈಥರ್ ವಾರ್ ಎಂದು ಕುಖ್ಯಾತವಾಗಿದೆ. ಕೊನೆಗೆ ಈ ಪ್ರಕರಣವು ಅಮೆರಿಕದ ಕಾಂಗ್ರೆಸ್ ಬಳಿಗೆ ಹೋಯಿತು. ಅವರು ಅರಿವಳಿಕೆಯನ್ನು ಕಂಡುಹಿಡಿದವರಿಗೆ 100000 ಡಾಲರುಗಳ ಬಹುಮಾನವನ್ನು ಘೋಷಿಸಿದರು.

ಹೋರೇಸ್ ವೆಲ್ಸ್, ನ್ಯೂಯಾರ್ಕ್ ನಗರಕ್ಕೆ ಹೋದರು. ಅಲ್ಲಿ ಕ್ಲೋರೋಫಾರಂ ಎನ್ನುವ ರಾಸಾಯನಿಕವನ್ನು ಅರಿವಳಿಕೆಯಾಗಿ ಬಳಸುವ ಬಗ್ಗೆ ತಮ್ಮ ಮೇಲೆ ಪ್ರಯೋಗಗಳನ್ನು ಕೈಗೊಂಡರು. ಕೊನೆಗೆ ಕ್ಲೋರೊಫಾರಮ್ಮಿಗೆ ದಾಸರಾದರು. ಆ

## ಸ್ವಲ್ಪವೂ ನೋವಾಗದಂತೆ ಹಲ್ಲನ್ನು ತೆಗೆದುಬಿಟ್ಟೆಯಲ್ಲ!

- **ಜತೆಗೆ ನೋವಿಲ್ಲದೆ ಹಲ್ಲನ್ನು ತೆಗೆಯುವ ನವಮನ್ವಂತರವು ಆರಂಭವಾಗಲಿದೆ ಎಂದು ಉಲ್ಲಾಸದಿಂದ ಸಹೋದ್ಯೋಗಿಯ ಬಳಿ ಭವಿಷ್ಯ ನುಡಿದರು.**
- **ಇದೊಂದು ವೈಯಕ್ತಿಕ ಅನುಭವ ಮಾತ್ರವಾ ಗಿರದೆ, ಮಾನವ ಕುಲದ ನೋವಿನ ಇತಿಹಾಸದಲ್ಲಿ ಬರೆದ ಹೊಸ ಅಧ್ಯಾಯದ ಮುನ್ನುಡಿಯಾಗಿತ್ತು.**
- **ವೆಲ್ಸ್ ತಮ್ಮ ದಂತವೈದ್ಯಕೀಯ ವೃತ್ತಿಯಲ್ಲಿ ನೈಟ್ರಸ್ ಆಕ್ಸೈಡ್ ಬಳಸಿ ಹಲ್ಲು ತೆಗೆಯಲು ಆರಂಭಿಸಿದರು.**
- **ಅವರ ಬಳಿಗೆ ಬರುವ ರೋಗಿಗಳಿಗೆ ನೋವಿನ ಅನುಭವವಾಗುತ್ತಿರಲಿಲ್ಲ ಅಥವಾ ಅತ್ಯಂತ ಕಡಿಮೆ ಪ್ರಮಾಣದ ನೋವಾಗುತ್ತಿತ್ತು.**
- **ಇದು ಎಷ್ಟು ದೊಡ್ಡ ಬದಲಾವಣೆಯನ್ನು ತಂದಿತು ಎಂದರೆ, ಹಲ್ಲನ್ನು ತೆಗೆಸಿಕೊಳ್ಳುವುದು ಒಂದು ಶಿಕ್ಷೆಯಲ್ಲ; ಅದೊಂದು ಮಧುರಾತಿಮಧುರ ಭಾವ (ಲಾಫಿಂಗ್ ಗ್ಯಾಸ್ ಆನಂದವನ್ನೂ ಕೊಡುತ್ತಿತ್ತಲ್ಲವೆ!) ಎಂದು ಜನರು ಭಾವಿಸುತ್ತಿದ್ದರು.**

ಮತ್ತಿನಲ್ಲಿ ಒಂದು ದಿನ ಇಬ್ಬರ್ ಮಹಿಳೆಯರ ಮೇಲೆ ಆಸಿಡ್ ಎರಚಿದರು. ಪೊಲೀಸರು ಅವರನ್ನು ಬಂಧಿಸಿ ಜೈಲಿಗೆ ಕಳುಹಿಸಿದರು. ಬೆಳಗಾಯಿತು. ಜೈಲಿನಲ್ಲಿದ್ದ ವೆಲ್ಸ್ ಪಶ್ಚಾತ್ತಾಪ ಪಡಲಾರಂಭಿಸಿದರು.


ಕೂಡಲೇ, ಕೊನೆಯ ಬಾರಿಗೆ ಕ್ಲೋರೋಫಾರಮ್ ಸೇವಿಸಿದರು. ಚೂರಿಯಿಂದ ತನ್ನ ತೊಡೆಯಲ್ಲಿರುವ ಪ್ರಧಾನ ರಕ್ತನಾಳವಾದ –ಮೋರಲ್ ಆರ್ಟರಿಯನ್ನು ಛೇದಿಸಿಕೊಂಡರು. ನೋವಿಲ್ಲದೆ ತಮ್ಮ ಅಂತಿಮ ಪ್ರಯಾಣವನ್ನು ಆರಂಭಿಸಿದರು.

ಮಾರ್ಟನ್, ಹೇಗಾದರೂ ಮಾಡಿ ಈ ಈಥರ್ ವಾರಿನಲ್ಲಿ ತಾವು ಗೆಲ್ಲಲೇ ಬೇಕು ಎಂದು ನಿರ್ಧರಿಸಿದ್ದರು. ಹಾಗಾಗಿ ತಮ್ಮ ಬಳಿ ಇದ್ದ ಅಷ್ಟೂ ಹಣವನ್ನು ಸೆನೆಟರುಗಳ ಕೃಪೆಯನ್ನು ಗಳಿಸಲು ಖರ್ಚು ಮಾಡಿದರು. ಮಾರ್ಟನ್, ಯಾವುದೋ ಒಂದು ಪತ್ರಿಕೆಯಲ್ಲಿ, ಜಾಕ್ಸನ್ನನ್ನು ಅಂತಿಮ ವಿಜಯಿ ಎಂದು ಘೋಷಿಸಲಾಗಿದೆ ಎನ್ನುವ ಸುದ್ದಿಯನ್ನು ಓದಿದರು. ಕೂಡಲೇ ಅವರಿಗೆ ಲಕ್ವ ಹೊಡೆಯಿತು. ಒಂದೇ ಒಂದು ಬಿಡಿಗಾಸಿಲ್ಲದೆ ಅವರು ಸದ್ದಿಲ್ಲದ ಹಾಗೆ ಸತ್ತು ಹೋದರು.

ಜಾಕ್ಸನ್, ತಾವೇ ಈಥರ್ ಅರಿವಳಿಕೆಯನ್ನು ಕಂಡುಹಿಡಿದದ್ದು ಎಂದು ದಶಕಗಳ ಕಾಲ ಪ್ರಚಾರ ಮಾಡುತ್ತಾ ಮಾಡುತ್ತಾ ಮತಿವಿಭ್ರಮಣೆಗೆ ಒಳಗಾದರು. ಒಂದು ದಿನ ಮಾರ್ಟನ್‌ರ ಸಮಾಧಿ ಕಲ್ಲಿನ ಮೇಲೆ ಅರಿವಳಿಕೆಯನ್ನು ಕಂಡುಹಿಡಿದವರು ಎಂಬ ಉಲ್ಲೇಖವನ್ನು ನೋಡಿ, ಶಾಶ್ವತ ಮತಿವಿಭ್ರಮಣೆಗೆ ಒಳಗಾಗಿ ಹುಚ್ಚಾಸ್ಪತ್ರೆಯನ್ನು ಸೇರಿದರು.

100000 ಡಾಲರುಗಳ ಬಹುಮಾನ ಯಾರಿಗೂ ದೊರೆಯಲಿಲ್ಲ. ಹೋರೆಸ್ ವೆಲ್ಸ್ ಮರಣಿಸಿದ ಕೆಲವು ದಿನಗಳಲ್ಲಿ, ಪ್ಯಾರಿಸ್ ಮೆಡಿಕಲ್ ಸೊಸೈಟಿಯು, ಅರಿವಳಿಕೆಯನ್ನು ಕಂಡುಹಿಡಿದು, ಅದನ್ನು ಯಶಸ್ವಿಯಾಗಿ ಶಸ್ತ್ರಚಿಕಿತ್ಸೆಯಲ್ಲಿ ಬಳಸಿದ್ದು ಹೋರೆಸ್ ವೆಲ್ಸ್ ಎಂದು ಅಧಿಕೃತವಾಗಿ ಘೋಷಿಸಿತು. ಹೀಗೆ ಈಥರ್ ಯುದ್ಧವು ಕೊನೆಗೊಂಡಿತು.

**– ಡಾ.ನಾ. ಸೋಮೇಶ್ವರ**



# ಮಹಿಳೆಯರ ಸುರಕ್ಷತೆ ಬಗ್ಗೆ ಹೈಕೋರ್ಟ್ ಕಳವಳ

## ಮೆಟ್ರೋ ರೈಲಿನಲ್ಲಿ ಸ್ತ್ರೀಯರ ಫೋಟೊ ಕ್ಲಿಕ್ಕಿಸಿದ್ದ ಪ್ರಕರಣ | ರದ್ದು ಅರ್ಜಿ ತಿರಸ್ಕೃತ

• ಪ್ರಜೋದಯ ವರದಿ



**ಬೆಂಗಳೂರು:** ಮಹಿಳೆಯರು ಯಾವ ಸ್ಥಳದಲ್ಲೂ ಸುರಕ್ಷಿತವಾಗಿಲ್ಲವೆಂದು ತೀವ್ರ ಕಳವಳ ವ್ಯಕ್ತಪಡಿಸಿರುವ ಹೈಕೋರ್ಟ್ ಮೆಟ್ರೋ ರೈಲಿನಲ್ಲಿ ಸಂಚರಿಸುವ ಮಹಿಳೆಯರ ದೇಹದ ಹಿಂಭಾಗಗಳನ್ನು ಮೊಬೈಲ್‌ನಲ್ಲಿ ಸೆರೆ ಹಿಡಿದು ಅವುಗಳನ್ನು ಇನ್‌ಸ್ಟಾಗ್ರಾಂ ಸಾಮಾಜಿಕ ಜಾಲ ತಾಣ ವೇದಿಕೆಯಲ್ಲಿ ಬಿತ್ತರಿಸಿ ನಂತರ ನಾಶಪಡಿಸಿದ ಆರೋಪಿಯ ವಿರುದ್ಧದ ಪ್ರಕರಣ ರದ್ದುಗೊಳಿಸಲು ನಿರಾಕರಿಸಿದೆ.

ನನ್ನ ವಿರುದ್ಧದ ಎಫ್‌ಐಆರ್ ಮತ್ತು ನಗರದ 2ನೇ ಹೆಚ್ಚುವರಿ ಚೀಫ್ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಿನ ನ್ಯಾಯಿಕ ವಿಚಾರಣೆ ರದ್ದುಪಡಿಸಬೇಕೆಂದು ಕೋರಿ ಕರಿ ಹೋಬನಹಳ್ಳಿ ತಿಗಳರಪಾಳ್ಯ ಮುಖ್ಯ ರಸ್ತೆಯ ನಿವಾಸಿ ಬಿ.ಕೆ.ದಿಗಂತ್ (28) ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯ ಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, ಅರ್ಜಿದಾರರು ಈ ಕೃತ್ಯ ಎಸಗಿಲ್ಲ. ಸಿಸಿಟಿವಿ ಕ್ಯಾಮರಾ ಪರಿಶೀಲಿಸಿದರೆ ಗೊತ್ತಾಗುತ್ತದೆಂಬ ಪ್ರತಿಪಾದನೆಗೆ ಮುಂದಾದರು. ಆದರೆ, ನ್ಯಾಯಮೂರ್ತಿಗಳು ವಕೀಲರ ಈ ಮಾತಿಗೆ ಕಿಡಿಕಿಡಿಯಾದರು. ಅವರನ್ನು ತೀವ್ರ ತರಾಟೆಗೂ ತೆಗೆದುಕೊಂಡರಲ್ಲದೆ, ಏನ್ರೀ ಇದೆಲ್ಲಾ ಅಸಂಬದ್ಧ. ಇಂಥಾದ್ದನ್ನೆಲ್ಲಾ ಮಾಡುವ ಇವರು ಯಾವ ರೀತಿಯ ಗಂಡಸರು. ಮಹಿಳೆಯರನ್ನು ಎಲ್ಲೂ ಸುರಕ್ಷಿತವಾಗಿರಲು ಬಿಡುತ್ತಿಲ್ಲವಲ್ಲಾ ಎಂದು ಆತಂಕ ಹೊರ ಹಾಕಿದರು. ಇಂತಹ ಕೃತ್ಯ ಮಾಡಿ ಅದನ್ನು ಇನ್‌ಸ್ಟಾಗ್ರಾಂನಲ್ಲಿ ಮೆಟ್ರೊ ಚಿಕ್ಸ್ ಎಂಬ ಹೆಸರಿನಲ್ಲಿ ಬಿತ್ತರಿಸಿರುವುದು ಏನನ್ನು ಬಿಂಬಿಸುತ್ತದೆ ಗೊತ್ತಾ. ನಿಮ್ಮ ಅರ್ಜಿದಾರ ಮಾಡಿರುವ ಘನಂದಾರಿ ಕೆಲಸವನ್ನು ಅಪರಾಧವಲ್ಲ ಎಂದು ಹೇಗೆ ಹೇಳುತ್ತೀರಿ. ಈ ಅರ್ಜಿಯಲ್ಲಿ ನಾನು ಯಾವುದೇ ತಾಂತ್ರಿಕ ಅಂಶಗಳ ಆಧಾರದಲ್ಲಿ ಆರೋಪಿ ಪಾರಾಗಲು ಬಿಡುವುದಿಲ್ಲವೆಂದು ಎಚ್ಚರಿಸಿ ಅರ್ಜಿ ವಜಾ ಮಾಡಿದರು.

ಅರ್ಜಿದಾರರ ವಿರುದ್ಧ, ಭಾರತೀಯ ನ್ಯಾಯ ಸಂಹಿತಾ-2023ರ (ಬಿಎನ್‌ಎಸ್) ಕಲಂ 78(2) (ಹಿಂಬಾಲಿಸುವುದು), 238(ಸಿ) (ಅಪರಾಧದ ಪುರಾವೆಯನ್ನು ಕಣ್ಮರೆ ಮಾಡುವುದು) ಮತ್ತು ಮಾಹಿತಿ ತಂತ್ರಜ್ಞಾನ ಕಾಯ್ದೆ-2000 ಕಲಂ 67 (ಎಲೆಕ್ಟ್ರಾನಿಕ್ ರೂಪದಲ್ಲಿ ಅಶ್ಲೀಲ ವಿಷಯವನ್ನು ಪ್ರಕಟಿಸುವುದು ಅಥವಾ ರವಾನಿಸುವುದು) ಅಡಿಯಲ್ಲಿ ಬನಶಂಕರಿ ಪೊಲೀಸ್ ಠಾಣೆ ಪೊಲೀಸರು ಸ್ವಯಂಪ್ರೇರಿತ ಕ್ರಿಮಿನಲ್ ಪ್ರಕರಣ ದಾಖಲಿಸಿಕೊಂಡಿದ್ದಾರೆ.

**ಪೊಲೀಸ್ ಕಾರ್ಯವೈಖರಿಗೆ ಕೋರ್ಟ್ ಕಿಡಿ**

ಎರಡು ಹಸು ಕಳವಾಗಿವೆ ಎಂಬ ಪ್ರಕರಣ ದಾಖಲಿಸಿಕೊಳ್ಳುವ ಕರ್ನಾಟಕ ಪೊಲೀಸರು, ಗಂಭೀರ ಅಪರಾಧಗಳ ಬಗ್ಗೆ ತಲೆಕೆಡಿಸಿಕೊಳ್ಳುವುದು ಅಷ್ಟರಲ್ಲೇ ಇದೆ ಎಂದು ಹೈಕೋರ್ಟ್, ಪೊಲೀಸರ ಕಾರ್ಯವೈಖರಿ ಬಗ್ಗೆ ಮತ್ತೊಮ್ಮೆ ವ್ಯಂಗ್ಯವಾಡಿದೆ.

ಚನ್ನಪಟ್ಟಣ ಗ್ರಾಮಾಂತರ ಎಂ.ಕೆ.ದೊಡ್ಡಿ ಪೊಲೀಸ್ ಠಾಣೆಯಲ್ಲಿ ನಮ್ಮ ವಿರುದ್ಧ ದಾಖಲಾಗಿರುವ ಎಫ್‌ಐಆರ್ ಮತ್ತು ಸ್ಥಳೀಯ ಜೆಎಂಎಫ್‌ಸಿ ಕೋರ್ಟ್‌ನಲ್ಲಿರುವ ವಿಚಾರಣೆ ರದ್ದು ಗೊಳಿಸಬೇಕೆಂದು ಕೋರಿ ತೋಟನಹಳ್ಳಿಯ ಮಂಗಳಮ್ಮ ಸೇರಿ ಒಟ್ಟು ನಾಲ್ವರು ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯ ಪೀಠ ಸೋಮವಾರ ವಿಚಾರಣೆ ನಡೆಸಿತು. ಅರ್ಜಿದಾರರ ಪರ ಹೈಕೋರ್ಟ್ ವಕೀಲ ಎನ್.ವಿನೋದ್, 2024ರಲ್ಲಿ ಎರಡು ಹಸು ಕಳುವಾಗಿವೆ ಎಂಬ ಆರೋಪದಡಿ ಒಂದೇ ಕುಟುಂಬದ ನಾಲ್ವರ ವಿರುದ್ಧ 2026ರಲ್ಲಿ ಕಳವು ಪ್ರಕರಣ ದಾಖಲಿಸಲಾಗಿದೆ ಎಂದು ದೂರಿದರು.

ಅದಕ್ಕೆ ಪ್ರಾಸಿಕ್ಯೂಷನ್ ವಿರುದ್ಧ ಗರಂ ಆದ ನ್ಯಾಯಪೀಠ, ಎರಡು ವರ್ಷಗಳ ಹಿಂದೆ ಎರಡು ಹಸು ನಾಪತ್ತೆಯಾಗಿವೆಯೆಂಬ ಆರೋಪಕ್ಕೆ ಈಗ ಪ್ರಕರಣ ದಾಖಲಿಸಿದ್ದೀರಿ. ಆದರೆ, ನೈಜ ಅಪರಾಧ ಪ್ರಕರಣಗಳನ್ನು ನೀವು ದಾಖಲಿಸುವುದೇ ಇಲ್ಲ. ಸಂತ್ರಸ್ತರು ನೂರು ಬಾರಿ ಪೊಲೀಸ್ ಠಾಣೆ ಮೆಟ್ಟಿಲೇರಬೇಕಲ್ಲವೇ ಎಂದು ಕುಟುಕಿ ಪ್ರಕರಣದ ವಿಚಾರಣೆಗೆ ತಡೆ ನೀಡಿ ಆದೇಶಿಸಿತು.

## ನಾಳೆ ತೆಂಕಲಗೂಡು ಮಠದಲ್ಲಿ ಧಾರ್ಮಿಕ ಕಾರ್ಯಕ್ರಮ

» ಮೊದಲನೇ ಪುಟದಿಂದ



ಪ್ರಾತಃಕಾಲ ಲಿಂಗೈಕ್ಯ ಸ್ವಾಮೀಜಿ ಅವರ ಕರ್ತೃ ಗದ್ದುಗೆಗಳಿಗೆ ಮಹಾ ರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ, ಅಷ್ಟೋತ್ತರ, ಅಲಂಕಾರ ಪೂಜೆ, ಮಹಾ ಮಂಗಳಾರತಿ ಹಾಗು ತೀರ್ಥಪ್ರಸಾದ ವಿನಿಯೋಗ ನಡೆಯಲಿದೆ. ಬೆಳಿಗ್ಗೆ 5 ಗಂಟೆಗೆ ಶಿವದೀಕ್ಷೆ ಹಾಗು ಅಯ್ಯಾಚಾರ, ಬೆಳಿಗ್ಗೆ 9 ಗಂಟೆಗೆ ಕಾಶೀ ಜ್ಞಾನಸಿಂಹಾಸನಾಧೀಶ್ವರ 1008 ಜಗದ್ಗುರು ಡಾ. ಚಂದ್ರಶೇಖರ ಭಗವತ್ಪಾದರವರ ಇಷ್ಟಲಿಂಗ ಮಹಾಪೂಜೆ ಜರುಗಲಿದೆ ಎಂದರು.

ಬೆಳಿಗ್ಗೆ 11 ಗಂಟೆಗೆ ಸಿದ್ಧಾಂತ ಶಿಖಾಮಣಿ ಪ್ರವಚನ-ಜನಜಾಗೃತಿ ಸಮಾವೇಶ ನಡೆಯಲಿದ್ದು, ಕಾಶಿ ಮಹಾಪೀಠದ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ಸಾನ್ನಿಧ್ಯ ವಹಿಸಲಿದ್ದಾರೆ. ಚನ್ನಸಿದ್ದೇಶ್ವರ ಸ್ವಾಮೀಜಿ ಕಾರ್ಯಕ್ರಮದ ನೇತೃತ್ವವಹಿಸಲಿದ್ದು, ಹಲವು ಮಠಾಧೀಶರು ಆಗಮಿಸುವರು. ಸಂಸದ ಶ್ರೇಯಸ್ ಪಟೇಲ್ ಉದ್ಘಾಟನೆ ನೆರವೇರಿಸಲಿದ್ದು, ಅಖಿಲ ಭಾರತ ವೀರಶೈವ ಮಹಾಸಭಾ ಜಿಲ್ಲಾಧ್ಯಕ್ಷ ನವಿಲೆ ಪರಮೇಶ್ ಅಧ್ಯಕ್ಷತೆ ವಹಿಸಲಿದ್ದಾರೆಂದರು.

ಶಾಸಕರಾದ ಸಿಮೆಂಟ್ ಮಂಜು, ಹೆಚ್.ಕೆ.ಸುರೇಶ್, ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ, ಗ್ರಂಥ ಲೋಕಾರ್ಪಣೆ ಮಾಡಲಿದ್ದಾರೆ. ಹಾಸನದ ಇಂಡಿಯಾನಾ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಮತ್ತು ಹಾರ್ಟ್ ಸೆಂಟರ್, ತೆಂಕಲಗೂಡು ಬೃಹನ್ಮಠ, ಪುನರ್ಜೀವ ಸ್ವಯಂ ಸೇವಾ ಸಂಸ್ಥೆ ಹಾಗು ಚನ್ನರಾಯಪಟ್ಟಣ ಸ್ವಯಂ ಪ್ರೇರಿತ ರಕ್ತ ಕೇಂದ್ರದಿಂದ ಆರೋಗ್ಯ ಉಚಿತ ತಪಾಸಣಾ ಶಿಬಿರ ಆಯೋಜಿಸಲಾಗಿದೆ. ಬಿಪಿ, ಸಕ್ಕರೆ ಪರೀಕ್ಷೆ, ಹೃದಯ, ಮೂಳೆ ತಪಾಸಣೆ, ಸ್ತ್ರೀ ಮತ್ತು ಪ್ರಸೂತಿ ಚಿಕಿತ್ಸೆ, ಉಸಿರಾಟದ ಸಮಸ್ಯೆ, ಮಂಡಿ, ಎದೆ ನೋವು, ಕಣ್ಣಿನ ತಪಾಸಣೆಯು ಬೆಳಿಗ್ಗೆ 10 ರಿಂದ ಮಧ್ಯಾಹ್ನ 2ರ ವರೆಗೆ ನಡೆಯಲಿದೆ ಎಂದರು.

ಸುದ್ದಿಗೋಷ್ಟಿಯಲ್ಲಿ ವೀರಶೈವ ಲಿಂಗಾಯತ ಮಹಾಸಭಾ ತಾಲ್ಲೂಕು ಅಧ್ಯಕ್ಷ ಕಟ್ಟಾಯ ಶಿವಕುಮಾರ್, ಮಮತಾ ಪಾಟೀಲ್, ಅವಿನಾಶ್, ದರ್ಶನ್, ಯೋಗೇಶ್ ಇದ್ದರು.

## ಡಿ.ಕೆ.ಶಿ. ಬಳಿಕ ಸಿಎಂ ಆಪ್ತರು ದೆಹಲಿಗೆ

» ಮೊದಲನೇ ಪುಟದಿಂದ

ಹಿರಿಯರು, ಅನುಭವಿಗಳೂ ಇದ್ದಾರೆ. ಅವರಿಗೂ ಅವಕಾಶ ದೊರೆಯಬೇಕೆಂದು ಆರೋಗ್ಯ ಸಚಿವ ದಿನೇಶ್‌ಗುಂಡೂರಾವ್ ಅಭಿಪ್ರಾಯಪಟ್ಟರು. ರಾಜ್ಯದಲ್ಲಿ ಸರ್ಕಾರ ಬಂದು ಈಗಾಗಲೇ ಮೂರು ವರ್ಷ ಸಮೀಪಿಸುತ್ತಿದೆ. ಸಚಿವ ಸಂಪುಟ ಪುನರ್ ರಚನೆಯಾಗಿ, ಉಳಿದವರಿಗೂ ಅಲ್ಲಿ ಅವಕಾಶ ಸಿಗಬೇಕು. ಈ ಕುರಿತು ಪಕ್ಷದ ವರಿಷ್ಠರು ಮತ್ತು ಮುಖ್ಯಮಂತ್ರಿ ಸೂಕ್ತ ತೀರ್ಮಾನ ಕೈಗೊಳ್ಳುವ ನಿರೀಕ್ಷೆ ಇದ್ದು, ಶೀಘ್ರದಲ್ಲಿಯೇ ಜಾರಿಗೆ ಬರಲಿದೆ ಎಂದರು.

**ದೆಹಲಿಗೆ 50 ಶಾಸಕರ ಟಿಕೆಟ್ ಬುಕ್ಕಿಂಗ್: ಹೆಚ್.ಡಿ.ಕೆ.**

ರಾಜ್ಯದಲ್ಲಿ ಮುಖ್ಯಮಂತ್ರಿ ಗಾದಿ ಫೈಪೋಟಿ ಕುರಿತು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಪ್ರತಿಕ್ರಿಯಿಸಿ, ದೆಹಲಿಗೆ ತೆರಳಲು 40ರಿಂದ 50 ಶಾಸಕರ ವಿಮಾನ ಟಿಕೆಟ್ ಬುಕ್ಕಿಂಗ್ ಪ್ರಕ್ರಿಯೆ ನಡೆಯುತ್ತಿದೆ. ಮುಖ್ಯಮಂತ್ರಿ ಆಗಬೇಕೆಂದು ಪದೇಪದೇ ದೆಹಲಿಗೆ ಭೇಟಿ ನೀಡುತ್ತಿದ್ದಾರೆ. ಈಗಾಗಲೇ ಸಂಕ್ರಾಂತಿ, ಯುಗಾದಿ ಕ್ರಾಂತಿ ಮಾತು ಮುಗಿದಿದೆ. ಚುನಾವಣೆ ಫಲಿತಾಂಶದ ಬಳಿಕ ಕ್ರಾಂತಿ ಆಗುವ ಬಗ್ಗೆ ಮಾತುಗಳು ಕೇಳಿ ಬರುತ್ತಿವೆ. ಯಾವ ರೀತಿ ಕ್ರಾಂತಿ ನಡೆಯಬಹುದೆಂದು ನಾನು ಕುತೂಹಲದಿಂದ ಕಾಯುತ್ತಿದ್ದೇನೆಂದು ಡಿ.ಕೆ.ಶಿವಕುಮಾರ್‌ಗೆ ಕುಟುಕಿದರು.

## ಚೋಳೆನಹಳ್ಳಿಯಲ್ಲಿ ಸಿಸಿ ರಸ್ತೆಗೆ ಭೂಮಿಪೂಜೆ



• ಪ್ರಜೋದಯ ವರದಿ

**ಹೊಳೆನರಸೀಪುರ:** ವಿಧಾನಸಭಾ ಕ್ಷೇತ್ರದ ದಂಡಿಗನಹಳ್ಳಿ ಹೋಬಳಿ ಚೋಳೆನಹಳ್ಳಿ ಗ್ರಾಮ ದಲ್ಲಿ ಸುಮಾರು 10 ಲಕ್ಷ ರೂ. ವೆಚ್ಚದ ಕಾಂಕ್ರಿಟ್ ರಸ್ತೆ ಕಾಮಗಾರಿಗೆ ಸಂಸದ ಶ್ರೇಯಸ್ ಪಟೇಲ್ ಅವರು ಸೋಮವಾರ ಭೂಮಿಪೂಜೆ ನೆರವೇರಿಸಿದರು.

ಈ ವೇಳೆ ಗ್ರಾಮದ ಮಹಿಳೆಯರೊಂದಿಗೆ ಮಾತನಾಡಿದ ಅವರು, ಗ್ಯಾರಂಟಿ ಯೋಜನೆಗಳು ಎಲ್ಲರಿಗೂ ತಲುಪುತ್ತಿವೆ ಅಲ್ಲವೇ. ಗೃಹ ಲಕ್ಷ್ಮಿ ಹಣ ಬೇಕೋ ಬೇಡವೋ ಎಂದು ಹಾಸ್ಯವಾಗಿ ಪ್ರಶ್ನಿಸಿದರು. ಈ ಸಂದರ್ಭದಲ್ಲಿ ಹೆಚ್ಚು ಮಹಿಳೆಯರು, ಗ್ಯಾರಂಟಿ ಯೋಜನೆಗಳಿಂದ ನಮಗೆ ಹಾಗು ಕುಟುಂಬ ನಿರ್ವಹಣೆಗೆಅನುಕೂಲವಾಗುತ್ತಿದೆಂದು ಸಂತಸ ವ್ಯಕ್ತಪಡಿಸಿದರು.

## ಭಾರತ-ನ್ಯೂಜಿಲೆಂಡ್ ಮಧ್ಯೆ ವ್ಯಾಪಾರ ಒಪ್ಪಂದ



• ಪ್ರಜೋದಯ ವರದಿ

**ನವದೆಹಲಿ:** ಭಾರತ ಮತ್ತು ನ್ಯೂಜಿಲೆಂಡ್ ನಡುವಿನ ದ್ವಿಪಕ್ಷೀಯ ವ್ಯಾಪಾರ ಮತ್ತು ಹೂಡಿಕೆಯನ್ನು ಉತ್ತೇಜಿಸುವ ನಿಟ್ಟಿನಲ್ಲಿ ಸೋಮವಾರ ಮಹತ್ವದ ಮುಕ್ತ ವ್ಯಾಪಾರ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಕೇಂದ್ರ ವಾಣಿಜ್ಯ ಸಚಿವ ಪಿಯೂಷ್ ಗೋಯಲ್ ಮತ್ತು ನ್ಯೂಜಿಲೆಂಡ್‌ನ ವ್ಯಾಪಾರ ಮತ್ತು ಹೂಡಿಕೆ ಸಚಿವ ಟಾಡ್ ಮೆಕ್‌ಕ್ಲೇ ಉಪ ಸ್ಥಿತಿಯಲ್ಲಿ ಒಪ್ಪಂದಕ್ಕೆ ಸಹಿ ಹಾಕಲಾಯಿತು.

ಈ ಒಪ್ಪಂದದಿಂದ ಭಾರತದ ಬಹುತೇಕ ಸರಕುಗಳು ಸುಂಕವಿಲ್ಲದೆ, ನ್ಯೂಜಿಲೆಂಡ್‌ಗೆ ಪ್ರವೇಶಿಸಲಿವೆ. ಜೊತೆಗೆ ಮುಂದಿನ 15 ವರ್ಷದಲ್ಲಿ ನ್ಯೂಜಿಲೆಂಡ್ ಭಾರತದಲ್ಲಿನ ತಯಾರಿಕೆ, ಸೇವೆ, ನಾವೀನ್ಯ ಮತ್ತು ಉದ್ಯೋಗ ಸೃಷ್ಟಿ ಸೇರಿ ವಿವಿಧ ಕ್ಷೇತ್ರಗಳಲ್ಲಿ 20 ಬಿಲಿಯನ್ ಡಾಲರ್ (1.88 ಲಕ್ಷ ಕೋಟಿ ರೂ.) ಹೂಡಿಕೆ ಮಾಡಲು ನಿರ್ಧರಿಸಲಾಗಿದೆ.

ಈ ಒಪ್ಪಂದದ ಅಡಿಯಲ್ಲಿ ನ್ಯೂಜಿಲೆಂಡ್‌ಗೆ ರಫ್ತಾಗುವ ಭಾರತದ ಶೇ.100 ರಷ್ಟು ಉತ್ಪನ್ನಗಳಿಗೆ ಸುಂಕ ಮುಕ್ತ ಪ್ರವೇಶ ಸಿಗಲಿದೆ. ಅದರಿಂದ ಜವಳಿ, ಸಿದ್ಧ ಉಡುಪು, ಚರ್ಮದ ವಸ್ತು, ಪಾದರಕ್ಷೆ, ಆಭರಣ ಮತ್ತು ಇಂಜಿನಿಯರಿಂಗ್ ಸರಕುಗಳ ರಫ್ತಿಗೆ ಹೆಚ್ಚಿನ ವೇಗ ಸಿಗಲಿದೆ. ಕೌಶಲ ಆಧಾರಿತ ಮತ್ತು ಕಾರ್ಮಿಕ ಪ್ರಧಾನ ವಲಯಗಳಲ್ಲಿ ಸ್ಪರ್ಧೆ ಹೆಚ್ಚಾಗುವುದರಿಂದ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ಲಾಭವಾಗಲಿದ್ದು, ಉದ್ಯೋಗ ಸೃಷ್ಟಿಗೆ ನೆರವಾಗಲಿದೆ.

# ಸ್ವಚ್ಛ ನಗರ ನಿರ್ಮಾಣದಲ್ಲಿ ಜನರ ಪಾತ್ರ ಪ್ರಮುಖ

• ಪ್ರಜೋದಯ ವರದಿ



**ಅರಸೀಕೆರೆ:** ಘನ ತ್ಯಾಜ್ಯ ವಿಲೇವಾರಿ ಹಾಗು ಸ್ವಚ್ಛ ನಗರ ನಿರ್ಮಾಣದಲ್ಲಿ ಸಾರ್ವಜನಿಕರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಹಸಿ ಮತ್ತು ಒಣ ತ್ಯಾಜ್ಯಗಳನ್ನು ವಿಂಗಡಿಸುವ ಮೂಲಕ ನಗರಸಭೆಯೊಂದಿಗೆ ಸಹಕರಿಸಬೇಕೆಂದು ಪೌರಾಯುಕ್ತ ಹೆಚ್.ಟಿ. ಕೃಷ್ಣಮೂರ್ತಿ ಅವರುಕರೆ ನೀಡಿದರು.

ನಗರಸಭೆ ಆವರಣದಲ್ಲಿ ಸ್ವಚ್ಛ ಭಾರತ್ ಮಿಷನ್-2026 ಯೋಜನೆಯಡಿ ಜನಜಾಗೃತಿ ಮೂಡಿಸುವ ಉದ್ದೇಶದಿಂದ ಆಯೋಜಿಸಲಾಗಿದ್ದ ಪ್ರಾತ್ಯಕ್ಷಿಕೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮಹಾತ್ಮ ಗಾಂಧೀಜಿ ಕನಸಾದ ಸ್ವಚ್ಛ ಭಾರತ್ ನಿರ್ಮಾಣಕ್ಕಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವೈಜ್ಞಾನಿಕ ವಿಧಾನಗಳಲ್ಲಿ ತ್ಯಾಜ್ಯ ವಿಲೇವಾರಿಗೆ ಹಲವು ಯೋಜನೆಗಳನ್ನು ಜಾರಿಗೆ ತಂದಿವೆ. ಆದರೂ ಸಾರ್ವಜನಿಕರಲ್ಲಿ ಜಾಗೃತಿ ಕೊರತೆಯಿಂದ ಸ್ಥಳೀಯ ಮಟ್ಟದಲ್ಲಿ ತ್ಯಾಜ್ಯ ನಿರ್ವಹಣೆ ಸವಾಲಾಗಿದೆ ಎಂದು ಹೇಳಿದರು.

ನಗರದ ಮನೆಗಳು, ಹೋಟೆಲ್‌ಗಳು ಸೇರಿ ವಿವಿಧೆಡೆ ಸಂಗ್ರಹವಾಗುವ ಘನ ತ್ಯಾಜ್ಯವನ್ನು ಆಟೋಗಳ ಮೂಲಕ ಸಂಗ್ರಹಿಸಿ ಸಂಸ್ಕರಿಸಲಾಗುತ್ತಿದೆ. ಈ ಪ್ರಕ್ರಿಯೆಯಿಂದ ಗೊಬ್ಬರ ತಯಾರಿಸಿ ಇದುವರೆಗೆ ಸುಮಾರು 80 ಸಾವಿರರೂ. ಆದಾಯವೂ ಲಭಿಸಿದೆ. ಸರ್ಕಾರ ಮಾನ್ಯತೆ ಪಡೆದ ಸಂಸ್ಥೆಯಿಂದ ದೃಢೀಕರಿಸಲ್ಪಟ್ಟ ಗೊಬ್ಬರವನ್ನು ಮಾರಾಟ ಮಾಡಲಾಗುತ್ತಿದೆ. ನಗರದ ಸ್ವಚ್ಛತೆಗೆ ಪುರುಷರು ಹಾಗು ಮಹಿಳೆಯರಿಂದ ಕೂಡಿದ ಪೌರ ಕಾರ್ಮಿಕರ ಪಡೆ ಕಾರ್ಯ ನಿರ್ವಹಿಸುತ್ತಿದ್ದು, ಧ್ವನಿವರ್ಧಕಗಳ ಮೂಲಕ ಕಸ ವಿಂಗಡನೆಗೆ ಸಂಬಂಧಿಸಿದಂತೆ ನಿರಂತರ ಜಾಗೃತಿ ಮೂಡಿಸಲಾಗುತ್ತಿದೆ. ಸಹಾಯಕರು ಮನೆ ಮನೆಗೆ ಭೇಟಿ ನೀಡಿ ಹಸಿ ಮತ್ತು ಒಣ ಕಸದ ಪ್ರತ್ಯೇಕ ಸಂಗ್ರಹಣೆ ಕುರಿತು ಅರಿವು ಮೂಡಿಸುತ್ತಿದ್ದಾರೆ.

ಪ್ಲಾಸ್ಟಿಕ್ ಬಳಕೆ ಪರಿಸರಕ್ಕೆ ಅಪಾಯಕಾರಿ ಆದ್ದರಿಂದ ಬಳಕೆ ನಿಷೇಧ ಕುರಿತು ವಿಶೇಷವಾಗಿ ಜಾಗೃತಿ ಮೂಡಿಸಲಾಗುತ್ತಿದೆ. ಸ್ವಚ್ಛ ನಗರ ನಿರ್ಮಾಣ ಕೇವಲ ಯೋಜನೆಯಾಗದೇ ಜನಾಂದೋಲನವಾಗಲು ಪ್ರಬುದ್ಧ ನಾಗರಿಕ ಸಮಾಜದ ಸಹಕಾರ ಅಗತ್ಯ. ನಗರದಲ್ಲಿರುವ ಘನ ತ್ಯಾಜ್ಯ ಸಂಸ್ಕರಣ ಘಟಕದ ಕಾರ್ಯವೈಖರಿಯನ್ನು ಪರಿಚಯಿಸಲು ನಗರಸಭೆ ಆವರಣದಲ್ಲಿ ಪ್ರಾತ್ಯಕ್ಷಿಕೆ ಏರ್ಪಡಿಸಲಾಗಿದ್ದು, ಸಾರ್ವಜನಿಕರು ಭೇಟಿ ನೀಡಿ ಮಾಹಿತಿ ಪಡೆದುಕೊಳ್ಳಬಹುದೆಂದು ತಿಳಿಸಿದರು.

ಪರಿಸರ ಇಂಜಿನೀಯರ್ ರವಿ ಕುಮಾರ್ ಮಾತನಾಡಿ, ಯಾದಾಪುರ ರಸ್ತೆಯ ತ್ಯಾಜ್ಯ ಸಂಸ್ಕರಣ ಘಟಕದಲ್ಲಿ ಯಂತ್ರೋಪಕರಣಗಳ ಪ್ರಾತ್ಯಕ್ಷಿಕೆ ಮೂಲಕ ಜನಸಾಮಾನ್ಯರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. ಹಸಿ, ಒಣ, ಗೃಹೋತ್ಪಾದಿತ ಅಪಾಯಕಾರಿ ಹಾಗು ಸ್ಯಾನಿಟರಿ ತ್ಯಾಜ್ಯಗಳ ವಿಲೇವಾರಿ ದೊಡ್ಡ ಸವಾಲಾಗಿದ್ದು, ನಗರಸಭೆ ಅದನ್ನು ಆದಾಯದ ಮೂಲವನ್ನಾಗಿ ಪರಿವರ್ತಿಸಿದೆ. ವಿವಿಧ ಹಂತಗಳಲ್ಲಿ ತ್ಯಾಜ್ಯ ಸಂಸ್ಕರಣೆ ನಡೆಸಿ ಗೊಬ್ಬರ ಉತ್ಪಾದನೆ ಮಾಡಲಾಗುತ್ತಿದೆ. ಸಾರ್ವಜನಿಕರಿಗೆ ಮಾಹಿತಿ ನೀಡಲು ಮಾಸಾಚರಣೆ ಕಾರ್ಯಕ್ರಮಗಳು ನಡೆಯುತ್ತಿದ್ದು, ಪರಿಸರ ಜಾಗೃತಿ ಹೆಚ್ಚಿದಾಗ ಮಾತ್ರ ಸ್ವಚ್ಛ ಅರಸೀಕೆರೆ ಕನಸು ನನಸಾಗಲಿದೆ. ಶೀಘ್ರದಲ್ಲೇ ಜಾಗೃತಿ ಜಾಥಾ ಆಯೋಜಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ಅನುಪಯುಕ್ತ ವಸ್ತುಗಳು, ಹಸಿ-ಒಣ ಕಸ ಹಾಗೂ ಪರಿಸರಕ್ಕೆ ಹಾನಿಕಾರಕ ಪ್ಲಾಸ್ಟಿಕ್ ಬಳಕೆಯ ಕುರಿತು ವಿವರಿಸಲಾಯಿತು. ಹಿರಿಯ ಸಹಾಯಕ ಇಂಜಿನೀಯರ್ ಸುನೀಲ್, ಜಗದೀಶ್, ಕಂದಾಯ ನಿರೀಕ್ಷಕ ಮಂಜುನಾಥ್, ವ್ಯವಸ್ಥಾಪಕಿ ಕಲಾವತಿ, ಹಿರಿಯ ಆರೋಗ್ಯ ನಿರೀಕ್ಷಕ ಲಿಂಗರಾಜು, ರೇವಣ್ಣ ಸಿದ್ದಪ್ಪ ಉಪಸ್ಥಿತರಿದ್ದರು.

## ಜೆ.ಬಿ.ತಮ್ಮಣ್ಣಗೌಡರಿಗೆ ವಿಶ್ವ ಮಾನವ ಪ್ರಶಸ್ತಿ




**ಹಾಸನ:** ನಿವೃತ್ತ ಶಿಕ್ಷಣಾಧಿಕಾರಿ ಜೆ.ಬಿ.ತಮ್ಮಣ್ಣಗೌಡ ಅವರಿಗೆ ತಮಿಳುನಾಡಿನ ಏಷಿಯಾ ಇಂಟರ್ ನ್ಯಾಷನಲ್ ಕಲ್ಚರ್‌ರೀಸರ್ಚ್ ಅಕಾಡೆಮಿಯು ವಿಶ್ವ ಮಾನವ ಪ್ರಶಸ್ತಿ ನೀಡಿ ಗೌರವಿದೆ.

**ತಮಿಳುನಾಡಿನ ಹೊಸೂರಿನ ಖಾಸಗಿ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ಸಂಸ್ಥೆಯ ಗೌರವಾಧ್ಯಕ್ಷ ಡಾ.ಶ್ರೀ ಕೃಷ್ಣಮೂರ್ತಿ ಸ್ವಾಮೀಜಿ, ಗೌರವ ಕಾರ್ಯದರ್ಶಿ ಡಾ.ಶ್ರೀಧರ್, ರಕ್ಷಣಾ ಕ್ಷೇತ್ರದ ಹಿರಿಯ ವಿಜ್ಞಾನಿ ಡಾ.ಕೆ.ಎಸ್. ಸುಬ್ರಮಣ್ಯ, ಬೆಂಗಳೂರಿನ ಪೀಣ್ಯದ ಸ್ವಾಮಿ ವಿವೇಕಾನಂದ ಶಾಲೆಯ ನಿರ್ದೇಶಕ ಡಾ.ಬಿ.ಎಂ.ಬಲ್ಲಾರಿ ಮತ್ತಿತರರಿದ್ದರು.**

## ಕೊಡಗಿಹಳ್ಳಿಯ ಇಂದ್ರಮ್ಮಗೆ ಕಾಯಕಯೋಗಿ ಪ್ರಶಸ್ತಿ




• ಪ್ರಜೋದಯ ವರದಿ

**ಹಾಸನ:** ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್‌ನಿಂದ ಮೇ 1ರ ಕಾರ್ಮಿಕ ದಿನಾಚರಣೆ ಯಲ್ಲಿ ಕಾಯಕಯೋಗಿ ಪ್ರಶಸ್ತಿ ಪ್ರದಾನ ಮಾಡುತ್ತಿದ್ದು, ಆಲೂರು ತಾಲ್ಲೂಕು ಕೊಡಗಿಹಳ್ಳಿ ಗ್ರಾಮದ ಇಂದ್ರಮ್ಮ ಭಾಜನರಾಗಿದ್ದಾರೆಂದು ಪರಿಷತ್ ಜಿಲ್ಲಾಧ್ಯಕ್ಷ ರವಿ ನಾಕಲಗೂಡು ಅವರು ಹೇಳಿದರು.

ಸುದ್ದಿಗೋಷ್ಟಿಯಲ್ಲಿ ಸೋಮವಾರ ಮಾತನಾಡಿದ ಅವರು, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ಸಮೀಪದ ಸೂಲಿಬೆಲೆಯಲ್ಲಿ ಮೇ 1ರ ಶುಕ್ರವಾರ ಪ್ರಶಸ್ತಿ ಪ್ರದಾನ ನಡೆಯಲಿದೆ. ಕಡು ಬಡತನದಲ್ಲಿ ಸ್ವಾವಲಂಬಿ ಬದುಕು ಕಟ್ಟಿಕೊಂಡಿರುವವರನ್ನು ಗುರುತಿಸಿ ಪ್ರೋತ್ಸಾಹಿಸುವುದು ಪರಿಷತ್‌ನ ಉದ್ದೇಶವಾಗಿದೆ ಎಂದರು.

ಇಂದ್ರಮ್ಮ ಅವರು ಕಾಡಿನಲ್ಲಿ ಸಿಗುವ ಬಿದಿರು ಸಂಗ್ರಹಿಸಿ ಅದರಿಂದ ಮರ, ಕುಕ್ಕೆ ತಯಾರಿಸಿ ಬದುಕು ನಡೆಸುತ್ತಿದ್ದಾರೆ. ಎರಡು ವರ್ಷಗಳ ಹಿಂದೆ ಗಂಡನನ್ನು ಕಳೆದುಕೊಂಡಿರುವ ಅವರು ಮಗನಿಗೆ ಉನ್ನತ ವ್ಯಾಸಂಗ ಕೊಡಿಸಿದ್ದಾರೆ. ಇಂದ್ರಮ್ಮ ಅವರು ಸಮಾಜಕ್ಕೆ ಮಾದರಿಯಾಗಿದ್ದಾರೆಂದರು.

ಬಿದಿರಿನಿಂದ ಸಾಮಾಗ್ರಿ ತಯಾರಿಸುವುದು ಕೇವಲ ಉದ್ಯೋಗವಲ್ಲ, ಒಂದು ಪರಂಪರೆ. ಇಂತಹ ಸಾಂಪ್ರದಾಯಿಕ ವೃತ್ತಿ ಉಳಿಸಿಕೊಂಡು ಜೀವನ ಸಾಗಿಸುತ್ತಿರುವ ಇಂದ್ರಮ್ಮ ಎಲ್ಲರಿಗೂ ಪ್ರೇರಣೆ. ಕಟ್ಟ ಕಡೆಯ ವ್ಯಕ್ತಿಗೂ ಗೌರವ ಸಿಗಬೇಕೆಂಬ ಉದ್ದೇಶದಿಂದ ಅವರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು ತಿಳಿಸಿದರು.

ರಾಜ್ಯ ವೈಜ್ಞಾನಿಕ ಪರಿಷತ್ ಜಿಲ್ಲಾ ಗೌರವಾಧ್ಯಕ್ಷ ಕಮಲ್‌ಕುಮಾರ್ ಅವರು ಮಾತನಾಡಿ, ಪರಿಷತ್ ರಾಜ್ಯಾಧ್ಯಕ್ಷ ಹುಲಿಕಲ್ ನಟರಾಜ್ ಅವರ ನೇತೃತ್ವದಲ್ಲಿ ಕಾರ್ಯಕ್ರಮ ನಡೆಯಲಿದೆ. ರಾಜ್ಯಾದ್ಯಂತ ಹತ್ತು ಹಲವು ಕಾರ್ಯಕ್ರಮಗಳನ್ನು ಪರಿಷತ್ ಆಯೋಜಿಸಿದೆ ಎಂದರು.

ಪ್ರಶಸ್ತಿಗೆ ಭಾಜನಾಗಿರುವ ಇಂದ್ರಮ್ಮ, ಪರಿಷತ್ ನಿರ್ದೇಶಕರಾದ ಯೋಗೀಶ್, ರಮೇಶ್, ನಂದ ಕುಮಾರ್, ವಿ.ಎಸ್.ರಾಣಿ ಇದ್ದರು.

## ಒಳಾಂಗಣ ಕ್ರೀಡಾಂಗಣ ಕಾಮಗಾರಿ ಪರಿಶೀಲನೆ



• ಪ್ರಜೋದಯ ವರದಿ

**ಅರಕಲಗೂಡು:** ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ 3 ಕೋಟಿ ರೂ. ವೆಚ್ಚದಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಶಾಸಕ ಎ.ಮಂಜು ಅವರು ತಿಳಿಸಿದರು.

ಪಟ್ಟಣದ ಸರ್ಕಾರಿ ಕಾಲೇಜಿಗೆ ಭೇಟಿ ನೀಡಿ ಕಾಮಗಾರಿ ಪರಿಶೀಲಿಸಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇದು ಜಿಲ್ಲೆಯಲ್ಲೇ ಪ್ರಥಮವಾಗಿದ್ದು ತಾಲ್ಲೂಕಿಗೆ ಇದೊಂದು ಉತ್ತಮ ಕೊಡುಗೆಯಾಗಿದೆ. ವಿದ್ಯಾರ್ಥಿಗಳ ಕ್ರೀಡಾ ಚಟುವಟಿಕೆಗಳಿಗೆ ಪ್ರೇರಣದಾಯಕವಾಗಿದೆ. ವಿದ್ಯಾರ್ಥಿಗಳು ಅದರ ಉಪಯೋಗ ಪಡೆದು ವಿಶ್ವವಿದ್ಯಾನಿಲಯ, ರಾಜ್ಯ ಮತ್ತು ರಾಷ್ಟ್ರ ಮಟ್ಟದ ಕ್ರೀಡಾಕೂಟಗಳನ್ನು ಪ್ರತಿನಿಧಿಸುವಂತೆ ಆದಾಗ ನಮ್ಮ ಶ್ರಮಕ್ಕೆ ಸಾರ್ಥಕವಾಗುತ್ತದೆ. ಸಾರ್ವಜನಿಕರ ಕ್ರೀಡಾ ಚಟುವಟಿಕೆಗಳಿಗೂ ಅವಕಾಶ ಕಲ್ಪಿಸುವ ಕುರಿತು ಪರಿಶೀಲಿಸಲಾಗುವುದು ಎಂದರು.

ಪಟ್ಟಣದಲ್ಲಿ ಈಜು ಕೊಳ ನಿರ್ಮಾಣಕ್ಕೆ ಸಹಭಾಗಿತ್ವ ನೀಡಲು ಖಾಸಗಿಯವರು ಮುಂದೆ ಬಂದರೆ ಕ್ರಮ ಕೈಗೊಳ್ಳಲಾಗುವುದು. ಕ್ರೀಡಾಂಗಣ ನಿರ್ಮಾಣಕ್ಕೆ ಅನುದಾನ ಒದಗಿಸಿದ ಸರ್ಕಾರಕ್ಕೆ ಕೃತಜ್ಞತೆ ಸಲ್ಲಿಸುವುದಾಗಿ ಹೇಳಿದರು.

ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಎ.ಆರ್.ಬಾಲಾಜಿ, ಸದಸ್ಯರಾದ ಚಿದಂಬರ ಬಾಬು, ರವಿಕುಮಾರ್, ಪ್ರಾಂಶುಪಾಲ ಎ.ಎಲ್.ಮಂಜುನಾಥ್ ಉಪಸ್ಥಿತರಿದ್ದರು.

# ಗೋಹತ್ಯೆ ಸಂಪೂರ್ಣ ನಿಷೇಧಕ್ಕೆ ಒತ್ತಾಯ

• ಪ್ರಜೋದಯ ವರದಿ



**ಅರಸೀಕೆರೆ:** ಗೋಹತ್ಯೆ ತಡೆದು, ಗೋವುಗಳಿಗೆ ರಾಷ್ಟ್ರೀಯ ಮಟ್ಟದ ಗೌರವ ನೀಡಬೇಕೆಂದು ಒತ್ತಾಯಿಸಿ ಅರಸೀಕೆರೆ ಮತ್ತು ಬಾಣಾವರ ಭಾಗದಲ್ಲಿ ವಿವಿಧ ಹಿಂದೂಪರ ಸಂಘಟನೆಗಳು ತಹಶೀಲ್ದಾರ್‌ಮೂಲಕ ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ಸಲ್ಲಿಸಲಾಯಿತು.

ಭಾರತೀಯ ಗೋ ಪರಿವಾರ ಚಾರಿಟಬಲ್ ಟ್ರಸ್ಟ್, ವಿಶ್ವ ಹಿಂದು ಪರಿಷತ್, ಬಜರಂಗದಳ, ಹಿಂದು ಜಾಗರಣ ವೇದಿಕೆ ಮತ್ತು ಪ್ರಾಣಿ ಪ್ರಿಯಾ ಸಂಘ ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ತಾಲ್ಲೂಕು ಕಚೇರಿ ಎದುರು ಪ್ರತಿಭಟನೆ ನಡೆಸಿ, ಗೋ ಸನ್ಮಾನ್ ಅಭಿಯಾನದ ಅಂಗವಾಗಿ ದೇಶದಾದ್ಯಂತ ತಾಲ್ಲೂಕು ಕೇಂದ್ರಗಳಲ್ಲಿ ಮನವಿ ಸಲ್ಲಿಸಲಾಗುತ್ತಿದ್ದು, ಅದರ ಭಾಗವಾಗಿ ಅರಸೀಕೆರೆ ತಹಶೀಲ್ದಾರ್ ಎಂ.ಜೆ.ಸಂತೋಷ್‌ಕುಮಾರ್ ಅವರಿಗೆ ಮನವಿ ನೀಡಲಾಯಿತು.

ಈ ವೇಳೆ ಮಾತನಾಡಿದ ಮುಖಂಡ ಕೆ.ಎಸ್.ಕೃಷ್ಣ, ಭಾರತೀಯ ಸಂಸ್ಕೃತಿ ಮತ್ತು ಸನಾತನ ಧರ್ಮದಲ್ಲಿ ಗೋವುಗೆ ತಾಯಿಯ ಸ್ಥಾನ ನೀಡಲಾಗಿದೆ. ಮುಕ್ಕೋಟಿ ದೇವತೆಗಳ ನೆಲೆ ಎಂದು ಪೂಜಿಸಲ್ಪಡುವ ಗೋವುಗಳ ಹತ್ಯೆ ನಡೆಯುತ್ತಿರುವುದು ದುರಂತಕರ ಸಂಗತಿ. ಗೋಹತ್ಯೆ ನಿಷೇಧಕ್ಕೆ ಕಾನೂನುಗಳಿದ್ದರೂ ಅವುಗಳ ಅನುಷ್ಠಾನ ಸಮರ್ಪಕವಾಗಿಲ್ಲ. ಅನಧಿಕೃತ ಕಸಾಯಿ ಖಾನೆಗಳು ಹೆಚ್ಚುತ್ತಿವೆ. ವಿದೇಶಗಳಿಗೆ ಗೋಮಾಂಸ ರಫ್ತು ಕೂಡ ನಡೆಯುತ್ತಿದೆ. ಅದನ್ನು ತಕ್ಷಣವೇ ನಿಷೇಧಿಸಬೇಕೆಂದು ಆಗ್ರಹಿಸಿದರು.

ಟಿ.ವಿ.ಅರುಣ ಕುಮಾರ್ ಅವರು ಮಾತನಾಡಿ, ಗೋ ಸನ್ಮಾನ್ ಕಾರ್ಯಕ್ರಮದಡಿ ದೇಶಾದ್ಯಂತ ಗೋಹತ್ಯೆ ಸಂಪೂರ್ಣ ನಿಷೇಧ, ಎಲ್ಲಾ ಪ್ರಾಣಿಗಳ ಮಾಂಸ ರಫ್ತು ನಿಷೇಧ ಹಾಗು ಗೋವುಗಳಿಗೆ ರಾಷ್ಟ್ರೀಯ ಸನ್ಮಾನ ನೀಡಬೇಕೆನ್ನುವುದು ಪ್ರಮುಖ ಬೇಡಿಕೆಯಾಗಿವೆ. ತಾಲ್ಲೂಕಿಗೊಂದು ಗೋಶಾಲೆ ಸ್ಥಾಪನೆ, ಜಿಲ್ಲೆಗೊಂದು ಗೋ ಅಭಯಾರಣ್ಯ ನಿರ್ಮಾಣ, ಗೋಶಾಲಾ ಕಾರ್ಮಿಕರನ್ನು ನರೇಗಾ ಯೋಜನೆಯಡಿ ಒಳಗೊಳ್ಳಿಸುವುದು, ಮೇವಿನ ಬೆಲೆ ನಿಯಂತ್ರಣ, ಪಠ್ಯಕ್ರಮದಲ್ಲಿ ಕೃಷಿ ಮತ್ತು ಗೋ ವಿಜ್ಞಾನ ಸೇರಿಸುವುದು, ಕೃಷಿ ವಿಶ್ವವಿದ್ಯಾಲಯಗಳಲ್ಲಿ ಪಂಚಗವ್ಯ ಸಂಶೋಧನಾ ಕೇಂದ್ರಗಳ ಸ್ಥಾಪನೆ ಹಾಗು ಸರ್ಕಾರಿ ಕಟ್ಟಡಗಳಲ್ಲಿ ರಾಸಾಯನಿಕಗಳ ಬದಲು ಗೋ ಮೂತ್ರ ಆಧಾರಿತ ಉತ್ಪನ್ನಗಳ ಬಳಕೆ ಸೇರಿ ಹಲವು ಅಂಶಗಳನ್ನು ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಬಾಣಾವರ ಸಂಪತ್ ಕುಮಾರ್, ಮನು, ಪಾರಸ್ ಜೈನ್, ಟಿ.ಕಿರಣ್ ಕುಮಾರ್, ಜಿತೇಂದ್ರ, ಶಿವಕುಮಾರ್, ಸರ್ವೇ ಚಂದ್ರಶೇಖರ್, ರಾಜಶೇಖರ, ಭರತ್, ಭವರ್ ಲಾಲ್ ದೇವಕಿ ಉಪಸ್ಥಿತರಿದ್ದರು.

## ಮೇ 1ಕ್ಕೆ ಗುಡ್ಡೇನಹಳ್ಳಿಯಲ್ಲಿ ಅಂಬೇಡ್ಕರ್ ಜಯಂತಿ




• ಪ್ರಜೋದಯ ವರದಿ

**ಹಾಸನ:** ನಗರದ ಗುಡ್ಡೇನಹಳ್ಳಿಯಲ್ಲಿ ಮೇ 1ರ ಸಂಜೆ 5 ಗಂಟೆಗೆ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತಿ ಏರ್ಪಡಿಸಲಾಗಿದೆ ಎಂದು ಗುಡ್ಡೇನಹಳ್ಳಿ ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ರಂಗಸ್ವಾಮಿ ಅವರು ಹೇಳಿದರು.

ಸುದ್ದಿಗೋಷ್ಟಿಯಲ್ಲಿ ಸೋಮವಾರ ಮಾತನಾಡಿ, ಅಂದು ಸಂಜೆ 5 ಗಂಟೆಗೆ ಕಾರ್ಯಕ್ರಮ ಆರಂಭವಾಗಲಿದೆ. ಟಿ.ನರಸೀಪುರದ ಕೊಳತ್ತೂರು ಬುದ್ಧ ವಿಹಾರದ ಸುಗತಪಾಲ ಬಂತೇಜಿ ಸಾನ್ನಿಧ್ಯ ವಹಿಸಲಿದ್ದಾರೆ. ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಕಾರ್ಯಕ್ರಮ ಉದ್ಘಾಟಿಸ ಲಿದ್ದು, ಮಾಜಿ ಶಾಸಕ ಪ್ರೀತಮ್ ಜೆ.ಗೌಡ ಅಧ್ಯಕ್ಷತೆ ವಹಿಸಲಿದ್ದಾರೆಂದರು.

ಚಲನಚಿತ್ರ ನಟ ದುನಿಯಾ ವಿಜಯ್, ಲೇಖಕ ಸುಬ್ಬು ಹೊಲೆಯಾರ್, ಮಹಾನಗರ ಪಾಲಿಕೆ ಪೌರಾಯುಕ್ತ ಆರ್.ಕೃಷ್ಣಮೂರ್ತಿ, ಚಲನಚಿತ್ರ ನಿರ್ದೇಶಕ ಜಡೇಶ್ ಹಂಪಿ, ಮುಖಂಡ ರಾದ ಕೃಷ್ಣದಾಸ್, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಹೆಚ್.ಎಂ.ಮನು ಕುಮಾರ್ ಮತ್ತಿತರರು ಭಾಗವಹಿಸಲಿದ್ದಾರೆಂದರು.

ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಗುವುದು. ಸರಿಗಮ ಖ್ಯಾತಿಯ ಗುರುದತ್ ಮತ್ತು ತಂಡದವರಿಂದ ಗಾನ ರಸ ಮಂಜರಿ ಕಾರ್ಯಕ್ರಮ ನಡೆಯಲಿದೆ ಎಂದರು.

ಅಂಬೇಡ್ಕರ್ ಯುವಕರ ಸಂಘದ ಪ್ರತಾಪ್, ಅನಿಲ್ ಕುಮಾರ್, ಸಂತೋಷ್, ಪ್ರದೀಪ್ ಇದ್ದರು.

## ಸೇವಾ ನ್ಯೂನ್ಯತೆ: 29 ಲಕ್ಷ ರೂ. ದಂಡ ವಿಧಿಸಿ ಆದೇಶ

» ಮೊದಲನೇ ಪುಟದಿಂದ

ಸೋರಿಕೆಯಿಂದಲ್ಲ. ಸಿಲಿಂಡರ್ ಪಡೆದ 40 ದಿನಗಳ ಬಳಿಕ ಅವಘಡ ಸಂಭವಿಸಿರುವುದರಿಂದ ಕಳಪೆ ಎನ್ನಲು ಸಾಧ್ಯವಿಲ್ಲ. ಹೆಚ್ಚಿನ ಪರಿಹಾರಕ್ಕಾಗಿ ನಮ್ಮ ವಿರುದ್ಧ ಆರೋಪ ಮಾಡುತ್ತಿದ್ದಾರೆಂಬ ಹೇಳಿಕೆಯನ್ನು ಕಂಪನಿ ನೀಡಿತ್ತು.

ಎಸ್‌ಬಿಐ ಜನರಲ್ ಇನ್ಶೂರೆನ್ಸ್ ಸಹ ತನ್ನ ವಾದದಲ್ಲಿ, ಚನ್ನಬಸಪ್ಪ ಹಾಗು ನಮಗೆ ಯಾವುದೇ ಗ್ರಾಹಕ ಸಂಬಂಧ ವಿಲ್ಲ. ಮೂರನೇ ವ್ಯಕ್ತಿಗೆ ವಿಮೆ ನೀಡುವುದಿಲ್ಲ. ಆದ್ದರಿಂದ ವಿಮಾ ಪರಿಹಾರ ನೀಡಲು ಸಾಧ್ಯವಿಲ್ಲ ಹಾಗು ತಮ್ಮಿಂದ ಸೇವಾ ನ್ಯೂನ್ಯತೆ ಉಂಟಾಗಿರುವುದಿಲ್ಲವೆಂದು ವಾದಿಸಿದ್ದರು.

ಪ್ರಕರಣದ ವಿಚಾರಣೆ ನಡೆಸಿದ ಆಯೋಗದ ಅಧ್ಯಕ್ಷೆ ಸಿ.ಎಂ.ಚಂಚಲ ಹಾಗು ಸದಸ್ಯೆ ಆರ್.ಅನುಪಮ ಅವರ ಪೀಠವು, ಗ್ರಾಹಕ ಚನ್ನಬಸಪ್ಪ ಅವರ ನಿರ್ಲಕ್ಷ್ಯದಿಂದ ಅಗ್ನಿ ಅವಘಡ ಸಂಭವಿಸಿದೆ ಎಂದು ಸಾಬೀತುಪಡಿಸುವ ಯಾವ ಪುರಾವೆಗಳು ಇಲ್ಲದ ಕಾರಣ ದಂಡ ಭರಿಸಬೇಕಾಗುತ್ತದೆಂದು ತೀರ್ಮಾನಿಸಿ ಒಟ್ಟು 27 ಲ.ರೂ. ದಂಡ, ಸೇವಾ ನ್ಯೂನ್ಯತೆಗಾಗಿ 5 ಸಾವಿರ ರೂ., ಮಾನ ಸಿಕ ಹಿಂಸೆಗಾಗಿ 5ಸಾವಿರ ರೂ., ಫಿರ್ಯಾದಿ ಶುಲ್ಕ 5 ಸಾವಿರ ರೂ.ಗಳನ್ನು ಮುಂದಿನ 6 ವಾರಗಳೊಳಗೆ ಪಾವತಿಸ ಬೇಕೆಂದು ಆದೇಶಿಸಿದೆ.

## ವೇದಾಂತದ ಆಳತೆ ಬಿಚ್ಚಿಟ್ಟ ಸ್ವಾಮಿ ನಿರ್ಭಯಾನಂದರ ಪ್ರವಚನ

# ಭಕ್ತಿತತ್ವ ಚಿಂತನೆಯ ಹಬ್ಬ: ಶಂಕರ ಜಯಂತಿ ವೈಭವ

• ಪ್ರಜೋದಯ ವರದಿ



**ಬೇಲೂರು:** ಪಟ್ಟಣದ ಕೋಟೆ ಪ್ರದೇಶದಲ್ಲಿರುವ ಶ್ರೀ ಶೃಂಗೇರಿ ಶಂಕರ ಮಠದಲ್ಲಿ ಆದಿ ಶಂಕರಾಚಾರ್ಯರ ಜಯಂತಿ ಅಂಗವಾಗಿ ವೈಭವಮಯವಾಗಿ ಧಾರ್ಮಿಕ ಕಾರ್ಯಕ್ರಮಗಳು ನೆರವೇರಿದವು. ಪೂಜೆ, ಭಜನೆ, ಉಪನ್ಯಾಸ ಹಾಗೂ ತತ್ವಚಿಂತನೆಯೊಂದಿಗೆ ಭಕ್ತರಿಗೆ ಆಧ್ಯಾತ್ಮಿಕ ಅನುಭವವನ್ನು ನೀಡಿತು.

ಶೃಂಗೇರಿ ಶಾರದಾ ಮಠದ ಧರ್ಮದರ್ಶಿ ವಿಜಯ ಕೇಶವ ಅವರ ನೇತೃತ್ವದಲ್ಲಿ ನಡೆದ ಕಾರ್ಯಕ್ರಮವು ಸಂಜೆ ಭಜನಾ ಕಾರ್ಯಕ್ರಮ ದೊಂದಿಗೆ ಆರಂಭವಾಯಿತು. ಶ್ರೀ ಶಾರದ ಗಾಯತ್ರಿ ಭಜನಾ ಮಂಡಳಿ ಯಿಂದ ನಡೆದ ಭಜನೆಗಳು ಭಕ್ತರ ಮನಸ್ಸಿನಲ್ಲಿ ಭಕ್ತಿ ಭಾವನೆ ಮೂಡಿಸಿದವು.

ನಂತರ ಮಠದ ಭಾರತೀತೀರ್ಥ ಸಭಾಂಗಣದಲ್ಲಿ ನಡೆದ ಉಪನ್ಯಾಸ ಕಾರ್ಯಕ್ರಮದಲ್ಲಿ ಗದಗನ ಶ್ರೀ ರಾಮಕೃಷ್ಣ-ವಿವೇಕಾನಂದ ಆಶ್ರಮದ ಅಧ್ಯಕ್ಷರಾದ ಸ್ವಾಮಿ ನಿರ್ಭಯಾನಂದ ಸರಸ್ವತಿ ಅವರು ತತ್ವಜ್ಞಾನಮಯವಾದ ಪ್ರವಚನ ನೀಡಿದರು.

ಪ್ರವಚನದಲ್ಲಿ ಅವರು ಕಠೋಪನಿಷತ್ತಿನ ಉದಾಹರಣೆಗಳನ್ನು ಉಲ್ಲೇಖಿಸಿ, ಆತ್ಮತತ್ತ್ವವನ್ನು ಕೇವಲ ಶಬ್ದಗಳಲ್ಲಿ ವಿವರಿಸುವುದರಿಂದ ಸಾರ್ಥಕತೆ ಸಿಗುವುದಿಲ್ಲ. ಅದು ಅನುಭವದ ಮೂಲ ಕವೇ ಅರಿವಾಗಬೇಕೆಂದು ಸ್ಪಷ್ಟಪಡಿಸಿದರು. ಅಂಧನು ಅಂಧನಿಗೆ ದಾರಿ ತೋರಿಸುವಂತಾಗ ಬಾರದು, ಸತ್ಯದ ಅರಿವಿಗೆ ನೈಜ ಜ್ಞಾನ ಅಗತ್ಯವೆಂದು ಅಭಿಪ್ರಾಯಪಟ್ಟರು.

ಹಿಂದೂ ಧರ್ಮದ ವ್ಯಾಪ್ತಿಯನ್ನು ವಿವರಿಸಿದ ಅವರು, ಪುರಾಣಗಳು ಕೇವಲ ಪ್ರಾರಂಭದ ಹಂತವಾಗಿದ್ದು, ಅವುಗಳ ಮೂಲಕ ತತ್ವಜ್ಞಾನಕ್ಕೆ ಪ್ರವೇಶ ಮಾಡಬೇಕು. ಪುರಾಣಗಳಲ್ಲಿ ಅಡಕವಾಗಿರುವ ತತ್ವವನ್ನು ಅರಿಯದೆ, ಅದನ್ನೇ ಅಂತಿಮ ಜ್ಞಾನವೆಂದು ಭಾವಿಸುವುದು ತಪ್ಪು ಎಂದು ಎಚ್ಚರಿಸಿದರು.

ಬೌದ್ಧ ಧರ್ಮ ಮತ್ತು ವೇದಾಂತದ ತತ್ವಗಳನ್ನು ಹೋಲಿಕೆ ಮಾಡಿದ ಅವರು, ಬೌದ್ಧರ ಅನಾತ್ಮ ಸಿದ್ಧಾಂತ ಮತ್ತು ಶಂಕರಾಚಾರ್ಯರ ಅದ್ವೈತ ತತ್ವಗಳ ನಡುವಿನ ಭಿನ್ನತೆ ಹಾಗೂ ಆಳವನ್ನು ವಿವರಿಸಿದರು. ''ಬ್ರಹ್ಮ ಸತ್ಯಂ, ಜಗನ್ಮಿಥ್ಯಾ'' ಎಂಬ ಆದಿ ಶಂಕರಾಚಾರ್ಯರ ಸಂದೇಶವು ಮಾನವನನ್ನು ಪರಮ ಸತ್ಯದ ಕಡೆಗೆ ಕರೆದೊಯ್ಯುವ ಮಾರ್ಗವೆಂದು ಹೇಳಿದರು.

ಇಂದಿನ ಆಧುನಿಕ ವಿಜ್ಞಾನ, ವಿಶೇಷವಾಗಿ ಕ್ವಾಂಟಮ್ ಫಿಸಿಕ್ಸ್, ಪ್ರಪಂಚದ ಮೂಲ ಸ್ವರೂಪವನ್ನು ವಿವರಿಸುವಾಗ ಅನಿರ್ವಚನೀಯತೆಯನ್ನು ಒಪ್ಪಿಕೊಳ್ಳುತ್ತಿದೆ. ಅದನ್ನೇ ಶಂಕರಾ ಚಾರ್ಯರು ಮಾಯೆ ಎಂದು ಬಹಳ ಹಿಂದೆಯೇ ವಿವರಿಸಿದ್ದಾರೆ. ಸನಾತನ ಧರ್ಮವನ್ನು ಆಳವಾಗಿ ಅರಿತಾಗ ಮಾತ್ರ ವಿಜ್ಞಾನಕ್ಕೂ ಸಂಪೂರ್ಣ ಅರ್ಥ ಸಿಗುತ್ತದೆಂದು ಧೈರ್ಯವಾಗಿ ಹೇಳಿದರು.

ಹಿಂದೂ ಧರ್ಮವನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಗಣಿತ, ಭೌತಶಾಸ್ತ್ರ, ಮನೋವಿಜ್ಞಾನ ಹಾಗೂ ಮಾನವ ವಿಕಾಸದ ಅರಿವು ಅಗತ್ಯ. ವೇದಾಂತವು ಕೇವಲ ಧರ್ಮವಲ್ಲ, ಅದು ಅಂತಿಮ ವಿಜ್ಞಾನ ಎಂಬುದಾಗಿ ಅವರು ಪ್ರತಿಪಾದಿಸಿದರು.

ಕಾರ್ಯಕ್ರಮದ ಅಂತ್ಯದಲ್ಲಿ ಅಷ್ಟಾವಧಾನ ಸೇವೆ, ಪ್ರಾಕಾರೋತ್ಸವ ಹಾಗೂ ಮಹಾ ಮಂಗಳಾರತಿ ಭಕ್ತಿ ಭಾವದಿಂದ ನೆರವೇರಿದವು. ಭಕ್ತರಿಗೆ ಪ್ರಸಾದ ವಿನಿಯೋಗ ಮಾಡಲಾಯಿತು. ಈ ಅಪರೂಪದ ಧಾರ್ಮಿಕ ಹಾಗೂ ತತ್ವಜ್ಞಾನಮಯ ಕಾರ್ಯಕ್ರಮದಲ್ಲಿ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಆಧ್ಯಾತ್ಮಿಕ ಚಿಂತನೆಗೆ ಸಾಕ್ಷಿಯಾದರು.

## ಪಾಕ್‌ನಲ್ಲಿ ನಡೆದ ಶಾಂತಿ ಮಾತುಕತೆ ವೈಫಲ್ಯಕ್ಕೆ ಅಮೇರಿಕಾವೇ ಕಾರಣ

• ಪ್ರಜೋದಯ ವರದಿ

**ಸೇಂಟ್ ಪೀಟರ್ಸ್‌ಬರ್ಗ್:** ಪಾಕಿಸ್ತಾನದಲ್ಲಿ ನಡೆದಿದ್ದ ಶಾಂತಿ ಸಂಧಾನ ಮಾತುಕತೆಗಳು ವಿಫಲವಾಗಲು ಅಮೇರಿಕಾದ ಹಸ್ತಕ್ಷೇಪ ಮತ್ತು ಅತಿಯಾದ ಬೇಡಿಕೆಗಳೇ ಕಾರಣ ಎಂದು ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಗಂಭೀರ ಆರೋಪ ಮಾಡಿದ್ದಾರೆ.

ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರನ್ನು ಭೇಟಿಯಾಗಲು ಸೋಮವಾರ ಸೇಂಟ್ ಪೀಟರ್ಸ್ ಬರ್ಗ್‌ಗೆ ಆಗಮಿಸಿದ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

ತಕ್ಷಣ ಬೇಕಾಗಿದ್ದಾರೆ
ಹಾಸನ ನಗರದ
ಪಿ.ಜಿ ಹಾಸ್ಟೆಲ್‌ಗೆ
ಅಡುಗೆ ಭಟ್ಟರು ಹಾಗೂ
ಅಡುಗೆ ಸಹಾಯಕಿಯರು
ಮತ್ತು ಸಹಾಯಕರು
ಬೇಕಾಗಿದ್ದಾರೆ
8453589228
8892104374

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019